# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಸೆಪ್ಟೆಂಬರ್ 05, 2020

ಸಂಪುಟ : 47 ಸಂಚಿಕೆ : 116 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com


## ಡ್ರಗ್ಸ್: ಸಿಸಿಬಿಯಿಂದ ನಟಿ ರಾಗಿಣಿ ಬಂಧನ

ಬೆಂಗಳೂರು, ಸೆ. 4 - ಡ್ರಗ್ಸ್ ಜಾಲಕ್ಕೆ ಸಂಬಂಧಿಸಿದಂತೆ ನಟಿ ರಾಗಿಣಿ ದ್ವಿವೇದಿ ಅವರನ್ನು ಸಿಸಿಬಿ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.



ಶುಕ್ರವಾರ ಬೆಳಿಗ್ಗೆ ನಟಿ ರಾಗಿಣಿಯನ್ನು ವಿಚಾರಣೆಗೆ ಕರೆತಂದಿದ್ದ ಸಿಸಿಬಿ ಅಧಿಕಾರಿಗಳು, ಸುಮಾರು ಏಳು ಗಂಟೆಗಳ ಸತತ ವಿಚಾರಣೆ ಬಳಿಕ ನಟಿಯನ್ನು ವಶಕ್ಕೆ ಪಡೆದಿದ್ದಾರೆ.

ಡ್ರಗ್ಸ್ ಮಾಫಿಯಾ ಜೊತೆ ಸಂಪರ್ಕ ಇಟ್ಟುಕೊಂಡಿದ್ದಾರೆ ಎಂಬ ಆರೋಪವಿತ್ತು. ರಾಗಿಣಿ ಸ್ನೇಹಿತ ರವಿಶಂಕರ್ ನೀಡಿದ ಸುಳಿವಿನ ಮೇಲೆ ಬೆಳಿಗ್ಗೆ ಅವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದರು.

ಸಿಸಿಬಿಯ ಹಿರಿಯ ಅಧಿಕಾರಿಗಳ ತಂಡ ನಗರದ ಹೊರ ವಲಯದಲ್ಲಿರುವ ಅವರ ಎರಡು ಫ್ಲಾಟ್‌ಗಳ ಮೇಲೆ ದಾಳಿ ನಡೆಸಿ, ಕೆಲವು ದಾಖಲೆಗಳನ್ನು ವಶಪಡಿಸಿಕೊಂಡು ನಂತರ ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರು.

ಡಿಸಿಪಿ ರವಿಕುಮಾರ್ ಅವರ ನೇತೃತ್ವದಲ್ಲಿ ಮಹಿಳಾ ಅಧಿಕಾರಿಗಳನ್ನೊಳಗೊಂಡ ತಂಡ ಇಡೀ ದಿನ ವಿಚಾರಣೆಗೊಳಪಡಿಸಿತು. ವಿಚಾರಣೆ ಸಂದರ್ಭದಲ್ಲಿ ಆಕೆಯ ಸ್ನೇಹಿತ ರವಿಶಂಕರ್ ನೀಡಿರುವ ಮಾಹಿತಿಯನ್ನು ಮುಂದಿಟ್ಟುಕೊಂಡು ಕನ್ನಡ ಚಿತ್ರರಂಗದಲ್ಲಿ ಡ್ರಗ್ಸ್ ಮಾಫಿಯಾದ ಬಗ್ಗೆ ಸಂಬಂಧಿಸಿದಂತೆ ಆಕೆಯಿಂದ ಮಾಹಿತಿ ಪಡೆಯುವ ಯತ್ನ ಮಾಡಿದ್ದರು. (2ನೇ ಪುಟಕ್ಕೆ)

# ಡಿಜೆ ಹಳ್ಳಿ ಗಲಭೆ ಪೂರ್ವ ನಿಯೋಜಿತ

## ಯಡಿಯೂರಪ್ಪ ಸರ್ಕಾರಕ್ಕೆ ಕಳಂಕ ತರುವ ಉದ್ದೇಶದಿಂದ ಗಲಭೆ: ಸತ್ಯ ಶೋಧನಾ ಸಮಿತಿ ವರದಿ

ಬೆಂಗಳೂರು, ಸೆ. 4 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರಕ್ಕೆ ಕಳಂಕ ತರುವ ಉದ್ದೇಶದಿಂದಲೇ ಅಲ್ಪ ಸಂಖ್ಯಾತರ ಸಂಘಟನೆಯೊಂದು ನಗರದ ಡಿ.ಜೆ. ಹಳ್ಳಿ ಮತ್ತು ಕೆ.ಜಿ. ಹಳ್ಳಿಯಲ್ಲಿ ಗಲಭೆ ಎಬ್ಬಿಸಿತು ಎಂದು ಸತ್ಯ ಶೋಧನಾ ಸಮಿತಿ ಸರ್ಕಾರಕ್ಕೆ ವರದಿ ನೀಡಿದೆ.

ಮಾಜಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮದನ್‌ಗೋಪಾಲ್ ನೇತೃತ್ವದ ತಂಡ ಘಟನೆಯ ಬಗ್ಗೆ ಸವಿಸ್ತಾರವಾದ ಮಾಹಿತಿ ಕಲೆ ಹಾಕಿ ಇಂದು ಖುದ್ದು ಮುಖ್ಯಮಂತ್ರಿಯವರಿಗೆ ವರದಿಯನ್ನು ಸಲ್ಲಿಸಿದೆ.

ಸರ್ಕಾರದ ಮೇಲಿನ ವಿಶ್ವಾಸವನ್ನು ಅಳಿಸಿ ಹಾಕುವುದು ಮತ್ತು ಜನರನ್ನು ಭಯಭೀತಗೊಳಿಸುವ ಮತ್ತು ರಾಜ್ಯಾದ್ಯಂತ ಧಾರ್ಮಿಕ ಸೌಹಾರ್ದತೆಯನ್ನು ಕೆಡಿಸುವ ಉದ್ದೇಶದಿಂದಲೇ ಎಸ್‌ಡಿಪಿಐ ಮತ್ತು ಪಿಎಫ್‌ಐ ಸಂಘಟನೆಗಳು ಈ ಗಲಭೆಗಳನ್ನು ನಡೆಸಿವೆ.

ರಾಜ್ಯಾದ್ಯಂತ ಕೋಮು ಗಲಭೆಗಳನ್ನೆಬ್ಬಿಸಿ,



**ರಾಜ್ಯಾದ್ಯಂತ ಧಾರ್ಮಿಕ ಸೌಹಾರ್ದತೆ ಕೆಡಿಸುವ ಉದ್ದೇಶದಿಂದಲೇ ಎಸ್‌ಡಿಪಿಐ ಮತ್ತು ಪಿಎಫ್‌ಐ ಸಂಘಟನೆಗಳು ಈ ಗಲಭೆಗಳನ್ನು ನಡೆಸಿವೆ ಎಂದು ವರದಿ**

ತಮ್ಮ ಸಂಘಟನೆಯನ್ನು ಬಲಪಡಿಸಿಕೊಳ್ಳುವುದು ಮತ್ತು ಹಿಂದೂಗಳ ಮೇಲೆ ದಬ್ಬಾಳಿಕೆ ಮಾಡುವ ಉದ್ದೇಶವೂ ಈ ಸಂಘಟನೆಯದ್ದಾಗಿದೆ.

ಕಾಲಾನುಕಾಲಕ್ಕೆ ಇಂತಹ ಘಟನೆಗಳನ್ನು ಮಾಡಿ, ಸರ್ಕಾರಕ್ಕೆ ಇರಿಸು ಮುರಿಸು ಉಂಟು ಮಾಡುವುದಲ್ಲದೆ, ರಾಜ್ಯದ ಜನರಲ್ಲಿ ಭಯಭೀತಿ ಮೂಡಿಸುವುದು ಈ ಸಂಘಟನೆಗಳ ಉದ್ದೇಶವಾಗಿದೆ.

ಇದೇ ಕಾರಣದಿಂದ ಮೈಸೂರು, ಮಂಗಳೂರು ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಆಗಿಂದಾಗ್ಗೆ ಕೋಮು ಗಲಭೆ ಪ್ರಚೋದಿಸುವ ಗಲಭೆಗಳನ್ನು ನಡೆಸಿವೆ.

ಅಷ್ಟೇ ಅಲ್ಲ ಅಲ್ಪಸಂಖ್ಯಾತರ ವಿರುದ್ಧ ಧ್ವನಿ ಎತ್ತುವ ನಾಯಕರು ಮತ್ತು ಮುಖಂಡರನ್ನು ಈ ಸಂಘಟನೆಗಳು ಗುರಿ ಮಾಡಿಕೊಂಡಿವೆ.

ಕರ್ನಾಟಕದಲ್ಲಿ ರಾಜಕೀಯವಾಗಿ ಬೆಳೆಯುವ ಏಕೈಕ ಉದ್ದೇಶದಿಂದ ಮುಸ್ಲಿಂ ಸಮುದಾಯದ ಯುವಕರನ್ನು ಸಂಘಟನೆಯತ್ತ ಓಲೈಯಿಸಿಕೊಳ್ಳಲು ಇಂತಹ ಪ್ರಚೋದನಾಕಾರಿ ಗಲಭೆಗಳನ್ನು ನಡೆಸುತ್ತಿವೆ. ನಗರದ ಕೆ.ಜಿ.ಹಳ್ಳಿ ಮತ್ತು ಡಿ.ಜೆ. ಹಳ್ಳಿಯಲ್ಲಿ ನಡೆದ ಘಟನೆ ಪೂರ್ವ ಯೋಜಿತವಾಗಿತ್ತು. ನಿಗದಿಪಡಿಸಿದ ಹಿಂದೂ ಮುಖಂಡರ ಮನೆಗಳು ಮತ್ತು ಪೊಲೀಸ್ ಠಾಣೆಗಳ ಮೇಲೂ ದಾಳಿ ನಡೆಸುವುದರ ಬಗ್ಗೆ ಗಲಭೆಗೂ ಮುನ್ನವೇ ತೀರ್ಮಾನ ತೆಗೆದುಕೊಂಡಿದ್ದರು.

ಇದಕ್ಕಾಗಿಯೇ ನಗರದ ವಿವಿಧ ಭಾಗಗಳಿಂದ ತಮ್ಮ ಸಂಘಟನೆ ಮತ್ತು ಮುಸ್ಲಿಂ ಯುವಕರನ್ನು ಗುಂಪು ಸೇರಿಸಿ, ಅಲ್ಲಿ ಪ್ರಚೋದನಕಾರಕ ಭಾಷಣ ಮಾಡಿ, ಗಲಭೆ ಎಬ್ಬಿಸಿದ್ದಾರೆ.

ಇದೇ ಸಂಘಟನೆಗಳು ದೆಹಲಿ ಮತ್ತು ಸ್ವೀಡನ್‌ನಲ್ಲೂ ಕೋಮು ಗಲಭೆ ಮಾಡಿವೆ. ಅಲ್ಲಿ ನಡೆದ ಗಲಭೆಗೂ ಇದಕ್ಕೂ ಸಂಬಂಧವಿದೆ. ಈ ಬಗ್ಗೆಯು ತನಿಖೆ ನಡೆಸಿ.

ಈ ಸಂಘಟನೆಗಳಿಗೆ ಕೆಲವು ಮೂಲಭೂತವಾದಿಗಳು ಮತ್ತು ಧಾರ್ಮಿಕ ಸಂಸ್ಥೆಗಳು ಸಂಪನ್ಮೂಲವನ್ನು ನೀಡುತ್ತಿವೆ. ಇದರ ಮೇಲೆ ಸರ್ಕಾರ ನಿಗಾವಹಿಸಿ, ಅವರ ಚಲನವಲನಗಳ ಬಗ್ಗೆ ಸತತವಾಗಿ ಗಮನಕೊಡಬೇಕು ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆಯ ಜೊತೆ ಸಂಪರ್ಕವಿಟ್ಟುಕೊಂಡು, ಜಂಟಿಯಾಗಿ ಕಾರ್ಯಾಚರಣೆ ಮಾಡಿದರೆ, ಇಂತಹ ಕೋಮು ಸಂಘಟನೆಗಳನ್ನು ಬಲಿ ಹಾಕಬಹುದಾಗಿದೆ.

ಯಾವುದೇ ಧರ್ಮದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಸುದ್ದಿ ಹಬ್ಬಿಸುವುದನ್ನು ತಕ್ಷಣವೇ ನಿಯಂತ್ರಿಸಬೇಕು ಎಂದು ವರದಿಯಲ್ಲಿ ತಿಳಿಸಿದ್ದಾರೆ.

ಈ ಗಲಭೆಗೆ ಕಾರಣರಾದ ಪುಂಡರಿಂದಲೇ ನಷ್ಟವನ್ನು ಸರ್ಕಾರ ವಸೂಲಿ ಮಾಡುವಂತೆ ತಿಳಿಸಿದ್ದಾರೆ.

## ಯುರೋಪ್ ಸೇರಿ ವಿಶ್ವದಾದ್ಯಂತ ಶಾಲೆಗಳು ಪುನರಾರಂಭ

### ಬ್ರಿಟನ್‌ನಲ್ಲಿ ಮಕ್ಕಳನ್ನು ಶಾಲೆಗೆ ಕಳಿಸದಿದ್ದರೆ ದಂಡ

ಪ್ಯಾರಿಸ್, ಅ. 4 - ಯುರೋಪ್ ದೇಶಗಳಿಂದ ಹಿಡಿದು ರಷ್ಯಾ ಹಾಗೂ ಇಸ್ರೇಲ್‌ವರೆಗಿನ ಹತ್ತಾರು ದೇಶಗಳ ಶಾಲೆಗಳು ಪುನರಾರಂಭವಾಗಿವೆ. ಕೋಟ್ಯಂತರ ಮಕ್ಕಳು ಮತ್ತೆ ಕಲಿಕೆಯ ಹಾದಿಗೆ ಮರಳಿದ್ದಾರೆ.

ಕೊರೊನಾ ಕರಿ ನೆರಳು ಎಲ್ಲೆಡೆ ಆವರಿಸಿದೆ. ಆದರೂ ಅಸಮಾನತೆ ನೀಗಿಸಲು ಹಾಗೂ ಆರ್ಥಿಕತೆಗೆ ಉತ್ತೇಜನ ನೀಡಲು ಶಿಕ್ಷಣ ಅನಿವಾರ್ಯವಾದ ಕಾರಣ ಜಗತ್ತಿನ ಹತ್ತು ಹಲವು ದೇಶಗಳು ಈ ಬೃಹತ್ ಶಾಲಾರಂಭ ಪ್ರಯೋಗಕ್ಕೆ ಮುಂದಾಗಿವೆ.

ಮಾಸ್ಕ್ ಧರಿಸಿದ ಮಕ್ಕಳನ್ನು ಪೋಷಕರು ಕಳವಳದಿಂದ ಕಳಿಸಿದರೆ, ಶಿಕ್ಷಕರು ಕಾಳಜಿ ಭರಿತ ಆತಂಕದಿಂದಲೇ ಮಕ್ಕಳನ್ನು ಬರ ಮಾಡಿಕೊಂಡಿದ್ದಾರೆ.

ಫ್ರಾನ್ಸ್, ಬ್ರಿಟನ್, ಇಸ್ರೇಲ್, ರಷ್ಯಾ, ಬಾಲ್ಕನ್ ದೇಶಗಳಲ್ಲಿ ಶಾಲೆಗಳು ಪೂರ್ಣಾರಂಭ ಕಂಡಿವೆ. ಅಮೆರಿಕದಲ್ಲಿ ಆನ್‌ಲೈನ್ ಹಾಗೂ ಆಫ್‌ಲೈನ್ ಮಿಶ್ರಣ ಮಾಡಿ ಕಲಿಕೆಗೆ ಚಾಲನೆ ನೀಡಲಾಗಿದೆ. ಮೊದಲನೇ ತರಗತಿಯ ಮಗುವನ್ನು (2ನೇ ಪುಟಕ್ಕೆ)

### ದೇಶದಲ್ಲೂ ಶಾಲೆಗಳ ಪುನರಾರಂಭಕ್ಕೆ ಸಲಹೆ


ನವದೆಹಲಿ, ಸೆ. 4-ದೇಶದಲ್ಲಿ ಶಾಲೆಗಳನ್ನು ಹಂತ ಹಂತವಾಗಿ ಪುನರಾರಂಭಿಸುವಂತೆ ಸಾರ್ವಜನಿಕ ಆರೋಗ್ಯ ಪರಿಣಿತರ ಗುಂಪೊಂದು ಸಲಹೆ ನೀಡಿದೆ.

ಇಂಡಿಯನ್ ಪಬ್ಲಿಕ್ ಹೆಲ್ತ್ ಅಸೋಸಿಯೇಷನ್, ಇಂಡಿಯನ್ ಅಸೋಸಿಯೇಷನ್ ಆಫ್ ಪ್ರಿವೆಂಟಿವ್ ಅಂಡ್ ಸೋಷಿಯಲ್ ಮೆಡಿಸಿನ್ ಹಾಗೂ ಇಂಡಿಯನ್ ಅಸೋಸಿಯೇಷನ್ ಆಫ್ ಎಪಿಡಮಾಲಜಿಸ್ಟ್ ಸಂಘಟನೆಗಳ ಪರಿಣಿತರು ಶಾಲೆಗಳ ಪುನರಾರಂಭಕ್ಕೆ ಒತ್ತಾಯಿಸಿದ್ದು, ಕೊರೊನಾ ವೈರಸ್ ಹರಡುವುದನ್ನು ತಡೆಯಲು ಲಾಕ್‌ಡೌನ್ ಹೇರುವುದು ಇನ್ನು ಪ್ರಯೋಜನಕ್ಕೆ ಬಾರದು ಎಂದಿದ್ದಾರೆ.

ಈಗ ವಿವೇಚನೆಯಿಂದ ಹೆಜ್ಜೆ ಇಡಬೇಕಿದೆ. ಹಂತ (2ನೇ ಪುಟಕ್ಕೆ)

## 252 ಪಾಸಿಟಿವ್, 7 ಜನ ಸಾವು

ದಾವಣಗೆರೆ, ಸೆ.4- ಜಿಲ್ಲೆಯಲ್ಲಿ ಶುಕ್ರವಾರ 252 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 7 ಜನರು ಸಾವನ್ನಪ್ಪಿದ್ದಾರೆ.



ಸೋಂಕು ಮುಕ್ತರಾಗಿ 125 ಜನರು ಬಿಡುಗಡೆಯಾಗಿದ್ದು, ಜಿಲ್ಲೆಯಲ್ಲಿ 2617 ಸಕ್ರಿಯ ಪ್ರಕರಣಗಳಿವೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ 10571 ಜನರಿಗೆ ಸೋಂಕು ಕಾಣಿಸಿಕೊಂಡಿದ್ದು, 7748 ಜನರು ಗುಣಮುಖರಾಗಿ ಬಿಡುಗಡೆ ಯಾಗಿದ್ದಾರೆ.

ದಾವಣಗೆರೆ ತಾಲ್ಲೂಕಿನಲ್ಲಿ 125, ಹರಿಹರ 17, ಜಗಳೂರು 15, ಚನ್ನಗಿರಿ 46, ಹೊನ್ನಾಳಿ 40 ಹಾಗೂ ಹೊರ ಜಿಲ್ಲೆಯ 9 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

ದಾವಣಗೆರೆ ವಿನೋಬನಗರದ 72 ವರ್ಷದ ವೃದ್ಧೆ, ಜಯನಗರದ 43 ಪುರುಷ, ಅಶೋಕ ನಗರದ 43 ವರ್ಷದ ಮಹಿಳೆ, ನಿಜಲಿಂಗಪ್ಪ ಬಡಾವಣೆಯ 66 ವರ್ಷದ ಪುರುಷ,

ದೊಡ್ಡಪೇಟೆಯ 62 ವರ್ಷದ ಮಹಿಳೆ, ಬಳ್ಳಾರಿ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ನಿಟ್ಟೂರಿನ 62 ವರ್ಷದ ಪುರುಷ, ಚನ್ನಗಿರಿ ಅರೆಹಳ್ಳಿಯ 46 ವರ್ಷದ ಮಹಿಳೆ ಸೋಂಕಿನಿಂದ ಮೃತರಾಗಿದ್ದಾರೆ.



**ಬಸ್ ರಶ್ !** ರಾಜ್ಯ ಸರ್ಕಾರ ಬಸ್ ಪ್ರಯಾಣಿಕರ ಮಿತಿ ಸಡಿಲಗೊಳಿಸಿದ ಪರಿಣಾಮ ಇದೀಗ ಬಸ್ಸುಗಳ ಎಲ್ಲಾ ಸೀಟುಗಳು ಭರ್ತಿಯಾಗುತ್ತಿವೆ. ಮೊದಲು 30 ಸೀಟುಗಳು ಭರ್ತಿಯಾಗುತ್ತಲೇ ಹೊರಡುತ್ತಿದ್ದ ಬಸ್ಸುಗಳು ಈಗ ಪೂರ್ಣ ಸೀಟುಗಳು ಭರ್ತಿಯಾಗುವವರೆಗೂ ನಿಲ್ಲುತ್ತಿವೆ.

## ಸೆ.22ರಿಂದ ಸಿಬಿಎಸ್‌ಇ ಕಂಪಾರ್ಟ್‌ಮೆಂಟ್ ಪರೀಕ್ಷೆ

ನವದಹೆಲಿ, ಸೆ. 4 – ಹತ್ತು ಹಾಗೂ 12ನೇ ತರಗತಿಯ ಸಿಬಿಎಸ್‌ಇ ಕಂಪಾರ್ಟ್‌ಮೆಂಟ್ ಪರೀಕ್ಷೆಗಳನ್ನು ಸೆಪ್ಟೆಂಬರ್ 22ರಿಂದ 29ರ ನಡುವೆ ನಡೆಸುವುದಾಗಿ ಸಿಬಿಎಸ್‌ಇ ಪ್ರಕಟಿಸಿದೆ.

ಕೊರೊನಾ ಹಿನ್ನೆಲೆಯಲ್ಲಿ ಹ್ಯಾಂಡ್ ಸ್ಯಾನಿಟೈಜರ್ ಹಾಗೂ ಮಾಸ್ಕ್ ಗಳೊಂದಿಗೆ ಪರೀಕ್ಷೆಗಳನ್ನು ನಡೆಸಲಾಗುವುದು ಎಂದು ಸಿಬಿಎಸ್‌ಇ ತಿಳಿಸಿದೆ. ಇದಕ್ಕೂ ಮುಂಚೆ ಕಂಪಾರ್ಟ್‌ಮೆಂಟ್ ಪರೀಕ್ಷೆಗಳನ್ನು ಮುಂದೂಡಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾಗಿದ್ದ ಅರ್ಜಿಯನ್ನು ಸಿಬಿಎಸ್‌ಇ ವಿರೋಧಿಸಿತ್ತು. ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ಸೆಪ್ಟೆಂಬರ್ 10ರಂದು ನಡೆಸಲಿದೆ.

ಸಿಬಿಎಸ್‌ಇ ಹತ್ತು ಹಾಗೂ 12ನೇ ತರಗತಿ ಪರೀಕ್ಷೆಯಲ್ಲಿ ಒಂದು ವಿಷಯವನ್ನು ಬಾಕಿ ಉಳಿಸಿಕೊಂಡವರನ್ನು ಕಂಪಾರ್ಟ್‌ಮೆಂಟ್ ಎಂದು ಪರಿಗಣಿಸಲಾಗುತ್ತದೆ. ಇವರು ಪರೀಕ್ಷೆಯಲ್ಲಿ ಭಾಗಿಯಾಗಿ ಉತ್ತೀರ್ಣರಾಗಲು ಅವಕಾಶ ನೀಡುವುದನ್ನು ಕಂಪಾರ್ಟ್‌ಮೆಂಟ್ ಪರೀಕ್ಷೆ ಎಂದು ಪರಿಗಣಿಸಲಾಗುತ್ತದೆ.

## ನಕಲಿ ಕೊರೊನಾ ಟೆಸ್ಟ್ : ದೆಹಲಿ ವೈದ್ಯ ಹಾಗೂ ಸಹಚರನ ಬಂಧನ

ನವದೆಹಲಿ, ಸೆ. 4 – ಫೋರ್ಜರಿ ಕೊರೊನಾ ಟೆಸ್ಟ್ ಫಲಿತಾಂಶದ ವರದಿ ನೀಡುತ್ತಿದ್ದ 34 ವರ್ಷದ ವೈದ್ಯ ಹಾಗೂ ಆತನ ಸಹಚರನನ್ನು ಬಂಧಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಕುಶ್ ಬಿಹಾರಿ ಪರಾಶರ್ ಎಂಬಾತ ಹಾಗೂ ಆತನ ಸಹಚರ ಅಮಿತ್ ಸಿಂಗ್ ಎಂಬುವವರು ಬಂಧಿತರಾಗಿದ್ದಾರೆ. ಫೋರ್ಜರಿ ನಡೆಯುತ್ತಿರುವ ಬಗ್ಗೆ ಪ್ರತಿಷ್ಠಿತ ಲ್ಯಾಬ್ ಒಂದು ದೂರು ನೀಡಿದ ನಂತರ ಪೊಲೀಸರು ಈ ಕ್ರಮ ತೆಗೆದುಕೊಂಡಿದ್ದಾರೆ.

**ಕಳೆದ ಎರಡೂವರೆ ತಿಂಗಳಿನಿಂದ 75ಕ್ಕೂ ಹೆಚ್ಚು ರೋಗಿಗಳಿಗೆ ನಕಲಿ ಕೊರೊನಾ ಟೆಸ್ಟ್ ವರದಿ ನೀಡಿಕೆ**

ರೋಗಿಗಳಿಗೆ ನರ್ಸಿಂಗ್ ಸಿಬ್ಬಂದಿ ಒದಗಿಸುವ ಸಂದರ್ಭದಲ್ಲಿ ಅವರನ್ನು ಕೊರೊನಾ ಪರೀಕ್ಷೆಗೆ ಒಳಪಡಿಸಲಾ ಗುತ್ತಿತ್ತು. ಈ ರೀತಿ ಇಬ್ಬರು ಸಿಬ್ಬಂದಿಯನ್ನು ಪರೀಕ್ಷೆಗೆ ಒಳಪಡಿಸುವಂತೆ ಉದ್ಯಮಿಯೊಬ್ಬರು ಪರಾಶರ್‌ಗೆ ಆಗಸ್ಟ್ 30ರಂದು ಕೇಳಿದ್ದರು.

ಆಗ ಪರಾಶರ್ ಫೋರ್ಜರಿ ಮಾಡಿದ ವರದಿಯನ್ನು ಉದ್ಯಮಿಗೆ ಕಳಿಸಿದ್ದರು. ನಂತರ ಉದ್ಯಮಿ ಈ ವರದಿಯನ್ನು ನರ್ಸ್‌ಗೆ ಕಳಿಸಿದ್ದರು. ತಮ್ಮ ಹೆಸರು ತಪ್ಪಾಗಿರುವುದನ್ನು ಗಮನಿಸಿದ ನರ್ಸ್, ಈ ಬಗ್ಗೆ ಲ್ಯಾಬ್‌ಗೆ ಕರೆ ಮಾಡಿದ್ದರು. ಆಗ ಪರೀಕ್ಷೆಯೇ ನಡೆದಿಲ್ಲ ಎಂದು ಲ್ಯಾಬ್ ತಿಳಿಸಿದೆ. ನಂತರ ಪೊಲೀಸರು ವಿಚಾರಣೆ (3ನೇ ಪುಟಕ್ಕೆ)

## ನೀಟ್, ಜೆಇಇ ಪರೀಕ್ಷೆಗಳ ಮುಂದೂಡಲು ಸುಪ್ರೀಂ ನಕಾರ

ನವದಹೆಲಿ, ಸೆ. 4 – ನೀಟ್ ಹಾಗೂ ಜೆಇಇ ಪರೀಕ್ಷೆಗೆ ದಾರಿ ಮಾಡಿಕೊಡುವ ತೀರ್ಪು ಮರು ಪರಿಶೀಲಿಸಬೇಕೆಂದು ದಾಖಲಾಗಿದ್ದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಆಗಸ್ಟ್ 17ರಂದು ಪರೀಕ್ಷೆಗೆ ಅವಕಾಶ ನೀಡುವ ಆದೇಶ ಮರು ಪರಿಶೀಲಿಸುವಂತೆ ಪ್ರತಿಪಕ್ಷಗಳ ಆಡಳಿತದ ಆರು ಸಚಿವರು ಸೇರಿದಂತೆ ಹಲವರು ಅರ್ಜಿ ದಾಖಲಿಸಿದ್ದರು.

ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್, ಬಿ.ಆರ್. ಗವಾಯಿ ಹಾಗೂ ಕೃಷ್ಣ ಮುರಾರಿ (2ನೇ ಪುಟಕ್ಕೆ)

## ಕೊಂಡಜ್ಜಿಯ ವೃತ್ತಿ ರಂಗಭೂಮಿ ಶಾಲೆ ನಿರ್ದೇಶಕರಾಗಿ ಯಶವಂತ್



ಬೆಂಗಳೂರು,ಸೆ.4- ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮದ ನಿಯೋಜಿತ ವೃತ್ತಿ ರಂಗಭೂಮಿ ಶಾಲೆಗೆ ರಂಗ ನಿರ್ದೇಶಕರನ್ನಾಗಿ ಯಶವಂತ ಸರ್ ದೇಶಪಾಂಡೆ ಅವರನ್ನು ರಂಗಾಯಣ ನಿರ್ದೇಶಕರ ಸ್ಥಾನಮಾನದೊಂದಿಗೆ ನೇಮಕ ಮಾಡಿ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಯಶವಂತ ಸರ್ ದೇಶಪಾಂಡೆ ಅವರನ್ನು ರಂಗ ಸಮಾಜದ ನಿಕಟಪೂರ್ವ ಸದಸ್ಯ ಮಲ್ಲಿಕಾರ್ಜುನ ಕಡಕೋಳ ಅಭಿನಂದಿಸಿದ್ದಾರೆ.

## ಹಿರಿಯ ವಕೀಲರ ಮಾರ್ಗಸೂಚಿ ಜಾರಿಗೆ ತರಲು ಸುಪ್ರೀಂ ವಿಚಾರಣೆ

ನವದಹೆಲಿ, ಸೆ. 4 – ಹಿರಿಯ ವಕೀಲರು ಎಂಬ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ 2017ರಲ್ಲಿ ನೀಡಲಾದ ತೀರ್ಪು ಹಾಗೂ ಪ್ರಕಟಿಸಲಾದ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂಬ ಅರ್ಜಿಯನ್ನು ವಿಚಾರಣೆಗೆ ಒಳಪಡಿಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ವಕೀಲರಿಗೆ ಹಿರಿತನದ ಮಾನ್ಯತೆ ನೀಡುವ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಶಾಶ್ವತ ಸಮಿತಿ ರಚನೆ ಸೇರಿದಂತೆ ಹಲವಾರು ಕ್ರಮಗಳ ಬಗ್ಗೆ ಅಕ್ಟೋಬರ್ 2017ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸಿತ್ತು.

ಈ ತೀರ್ಪಿನ ಜಾರಿಗಾಗಿ ನ್ಯಾಯಮೂರ್ತಿ ಆರ್.ಎಫ್. ನಾರಿಮನ್ ಅವರ ನೇತೃತ್ವ ಸುಪ್ರೀಂ ಕೋರ್ಟ್ ಪೀಠದ ಎದುರು (3ನೇ ಪುಟಕ್ಕೆ)

## ಹರಪನಹಳ್ಳಿ ತಾಲ್ಲೂಕಿನ 7 ಗ್ರಾ.ಪಂ.ಗಳು ದಾವಣಗೆರೆಗೆ ಮರು ಸೇರ್ಪಡೆಗೆ ಪ್ರಯತ್ನ



**ಜಗಳೂರು ಶಾಸಕ ಎಸ್.ವಿ. ರಾಮಚಂದ್ರ**

ಹರಪನಹಳ್ಳಿ, ಸೆ.4- ಜಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹರಪನಹಳ್ಳಿ ತಾಲ್ಲೂಕಿನ 7 ಗ್ರಾಮ ಪಂಚಾಯಿತಿಗಳು ದಾವಣಗೆರೆ ಜಿಲ್ಲೆಯಿಂದ ಬಳ್ಳಾರಿ ಜಿಲ್ಲೆಗೆ ಸೇರ್ಪಡೆಗೊಂಡ ನಂತರ ಅಭಿವೃದ್ಧಿ ಕೆಲಸಗಳು ಕುಂಠಿತವಾಗಿದ್ದು, ಪುನಃ ತಾಲ್ಲೂಕಿನ 7 ಗ್ರಾಮ ಪಂಚಾಯಿತಿಗಳನ್ನು ದಾವಣಗೆರೆ ಜಿಲ್ಲೆಗೆ ಮರು ಸೇರ್ಪಡೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ ಎಂದು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ (3ನೇ ಪುಟಕ್ಕೆ)


**10ನೇ ವರ್ಷದ ಪುಣ್ಯಸ್ಮರಣೆ**



ದಿ. ಹೆಚ್.ಎಂ ನಾಗರಾಜಪ್ಪ

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,

ಮಕ್ಕಳು ಹಾಗೂ ಕುಟುಂಬ ವರ್ಗದವರು.
ಸುಮ ಟ್ರೇಡಿಂಗ್ ಕಂಪನಿ





# ಭಾರತದ ಮೊದಲ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ

ಒಂದು ಶುಭ ಕಾರ್ಯ ಪ್ರಾರಂಭವಾಗಬೇಕಾದರೆ 'ಬೆಕ್ಕಿಗಿಂತ ಮುಂಚೆ ಅಡ್ಡಾಗಿ ಬರುವ ಈ ಸಮಾಜ ಬಾಂಧವರು. ಇಂತಹವರ ಮಧ್ಯೆ ಬಂದ ಅಡ್ಡಿ ಆತಂಕಗಳನ್ನು ಮೆಟ್ಟಿ ನಿಂತು ಯಶಸ್ವಿಯಾಗುವುದು ಸುಲಭದ ಮಾತಲ್ಲ, ಅದರಲ್ಲೂ ಪುರುಷ ಪ್ರಧಾನ ಈ ಸಮಾಜದಲ್ಲಿ ಮಹಿಳೆಯರು ಸಾಧನೆ ಮಾಡುವಾಗಿನ ವೇದನೆಯನ್ನು ಕುರಿತೇ ವೀರ ವಿರಾಗಿಣಿ, ಕನ್ನಡದ ಪ್ರಪ್ರಥಮ ಕವಿಯತ್ರಿ ಅಕ್ಕ ನವರು 'ನೊಂದ ನೋವ ನೋಯವರೆತ್ತ ಬಲ್ಲರೋ ಚನ್ನಮಲ್ಲಿಕಾರ್ಜುನ' ಎಂದು 12ನೇ ಶತಮಾನದಲ್ಲಿ ನುಡಿದ ನುಡಿಗಳು 21ನೇ ಶತಮಾನದಲ್ಲಿಯೂ ಪ್ರಸ್ತುತ.

*ಹೊತ್ತು ಹೊತ್ತಿಗೆ ತುತ್ತನ್ನಿಕ್ಕಿದಾಕೆ*
*ಮನೆಮನೆಯ ದೀಪ ಬೆಳಗಿದಾಕೆ*
*ನಿನಗೆ ಬೇರೆ ಹೆಸರು ಬೇಕೆ 'ಸ್ತ್ರೀ'*
*ಎಂದರೆ ಅಷ್ಟೇ ಸಾಕೆ...?*

'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಮಾತುಗಳನ್ನು ನಾವು ನೀವುಗಳೆಲ್ಲಾ ಕೇಳಿದ್ದೇವೆ. ಇಷ್ಟೆಲ್ಲಾ ಪೂಜ್ಯ ಭಾವನೆಯಿಂದ ಸುಸಂಸ್ಕೃತ ಸಮಾಜ ಸ್ತ್ರೀಯರನ್ನು ಗೌರವಿಸುತ್ತಾ ಬಂದಿದೆ ಹಾಗೂ ಸ್ತ್ರೀ ತರುಣಿಯಾಗಿ, ಮಡದಿಯಾಗಿ, ಮನೆ ಬೆಳಗುವ ಸೊಸೆಯಾಗಿ, ಬದಲಾದ ಕಾಲ ಘಟ್ಟದಲ್ಲಿ ದುಡಿಯುವ ಹೆಣ್ಣುಮಗಳಾಗಿ



ಹಗಲಿರುಳೂ ಅವಿಶ್ರಾಂತವಾಗಿ ಹೊರ, ಒಳಗಿನ ಗುಟ್ಟುಗಳನ್ನು ಬಿಟ್ಟುಕೊಡದೆ. 'ಸಂಸಾರ ಗುಟ್ಟು ವ್ಯಾಧಿ ರಟ್ಟು' ಎಂಬುದನ್ನು ಅರಿತು ಆಚರಣೆಯಲ್ಲಿ ತಂದಿರುವವಳು, ತರುತ್ತಿರುವವಳು, ಮುಂದೆಯೂ ಪರಂಪರೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವವಳು ಎನ್ನುವುದರಲ್ಲಿ ಎರಡನೇ ಮಾತಿಲ್ಲ.

ಹೇಮ ನಿನ್ನದಲ್ಲ, ಭೂಮಿ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ, 'ಜ್ಞಾನರತ್ನವೆಂಬುದು ನಿನ್ನ ನಿಜದ ಒಡವೆ ಅದನ್ನು ಧರಿಸಿ ಸದಾ ನಿಶ್ಚಿಂತನಾಗಿರು' ಎಂದು ಶೂನ್ಯ ಪೀಠಾಧ್ಯಕ್ಷರಾದ ಅಲ್ಲಮ ಪ್ರಭುದೇವರು ನುಡಿದಿದ್ದಾರೆ.

ಈ ದಿಸೆಯಲ್ಲಿ ಸುಮಾರು ಎರಡು ನೂರು ವರ್ಷಗಳ ಹಿಂದೆಯೇ ಮಹಾರಾಷ್ಟ್ರದ ಸತಾರಾ ಜಿಲ್ಲೆಯ, ನೈಂಗಾನ್ ಎಂಬ ಗ್ರಾಮದ ಸಾವಿತ್ರಿ ಬಾಯಿ

**ಶೋಷಿತರ ಮೊದಲ ವಿದ್ಯಾದೇವತೆ, ಆಧುನಿಕ ಭಾರತದ ಶಿಕ್ಷಣ ಮಾತೆ, ನಿಸ್ವಾರ್ಥ ಸೇವೆಗೆ ಅನುಕರಣೀಯ ಮಾದರಿ ವ್ಯಕ್ತಿತ್ವ ಸಾವಿತ್ರಿ ಬಾಯಿ ಫುಲೆ**

ಫುಲೆಯವರು ತುಳಿತಕ್ಕೊಳಗಾದ ಮಹಿಳೆಯರ ಎದೆಗೆ 'ಅಕ್ಷರದ ಬೀಜವನ್ನು ಬಿತ್ತಿದ ಮಹಾನ್ ಚೇತನ', ದೇವನೂರು ಮಹಾದೇವ ಅವರು ಹೇಳುವಂತೆ ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಎಂದೂ ಹುಸಿ ಹೋಗುವುದಿಲ್ಲ ಎಂಬುದನ್ನು ಸಾಧಿಸಿ, ಪರಿಚಯಿಸಿದವರು ಸಾವಿತ್ರಿ ಬಾಯಿ ಫುಲೆಯವರು.

'ಬಾಲ್ಯ ವಿವಾಹಕ್ಕೊಳಗಾದ 8 ವರ್ಷದ ಪೋರಿ 13 ವರ್ಷದ ಪೋರ ಜ್ಯೋತಿ ಬಾಫುಲೆಯವರ ಕೈ ಹಿಡಿದು ಸಮಾಜದಲ್ಲಿ ಶೋಷಣೆಗೆ ಒಳಗಾದ ಅಸ್ಪ ಶ್ಯರೆಂದು ತುಳಿತಕ್ಕೊಳಪಟ್ಟಿದ್ದ ಮಹಿಳೆಯರ ಎದೆಯಲ್ಲಿ ಅಕ್ಷರದ ಕಿಚ್ಚನ್ನು ಹಚ್ಚಿ ಜ್ಞಾನದ ಜ್ಯೋತಿಯನ್ನು ಬೆಳಗಿಸಿ, ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಿದವರು ಫುಲೆ ದಂಪತಿ.

ಪುರುಷ ಪ್ರಧಾನವಾದ ಸಮಾಜದಲ್ಲಿ ಮಹಿಳೆಯೊಬ್ಬಳು ಸಮಾಜದ ಅಪಮಾನಗಳನ್ನು ಮೆಟ್ಟಿನಿಂತು ಭಾರತದ ಪ್ರಪ್ರಥಮ ಮಹಿಳಾ ಶಿಕ್ಷಕಿಯಾಗಿ ಗುರುತಿಸಿಕೊಂಡ ಸಾವಿತ್ರಿ ಬಾಯಿ ಫುಲೆಯವರು ಇದು ಇತಿಹಾಸ ಚರಿತ್ರೆ.

ದಾನ-ಧರ್ಮಗಳಿಗೆ, ಸಮಾಜ ಸೇವೆಗೆ, ಗುರು-ವಿರಕ್ತರ, ಸಾಧು-ಸಂತರ, ಸೇವೆಗೆ ತಮ್ಮ ಮನೆತನ ವನ್ನೇ ಮೀಸಲಾಗಿಟ್ಟುಕೊಂಡಿರುವ ದಾವಣಗೆರೆ ಮಹಾನಗರದ ಹಲವಾರು ಮನೆತನಗಳಲ್ಲಿ ಚಿಗಟೇರಿ ಮನೆತನವೂ ಒಂದು. ಆ ಮನೆತನದ ಹಿರಿಯ ಜೀವ ಧರ್ಮಪ್ರಕಾಶ ಚಿಗಟೇರಿ ಮುರಿಗೆಪ್ಪ ನವರು 60ರ ದಶಕದಲ್ಲಿಯೇ ದಾವಣಗೆರೆ ಮಹಾನಗರದಲ್ಲಿ ಚಿಗಟೇರಿ ಸಾರ್ವಜನಿಕ ಆಸ್ಪತ್ರೆ ನಿರ್ಮಾಣ ಮಾಡಿದ್ದು ಈಗ ಅದು ಪೂರ್ಣ ಪ್ರಮಾಣದ ಕೋವಿಡ್ 19 ಆಸ್ಪತ್ರೆಯಾಗಿ ತಾತ್ಕಾಲಿಕವಾಗಿ ಪರಿವರ್ತನೆಗೊಂಡಿದೆ.

1962ರಲ್ಲಿ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯನ್ನು ಪ್ರಾರಂಭಿಸಿ, ಅದರಡಿಯಲ್ಲಿ ದಾವಣಗೆರೆ ನಗರದ ಹಳೆ ಪ್ರದೇಶದ ಹೆಣ್ಣು ಮಕ್ಕಳು, ಪ್ರೌಢಶಿಕ್ಷಣಕ್ಕಾಗಿ ಅವಲಂಬಿತವಾಗಿದ್ದ ಒಂದೇ ಶಾಲೆ ಸೀತಮ್ಮ ಬಾಲಕಿಯರ ಪ್ರೌಢಶಾಲೆ. ಆ ಕಾಲದಲ್ಲಿ ಮೈ ನೆರೆತ ಹೆಣ್ಣು ಮಕ್ಕಳನ್ನು ರೈಲ್ವೇ ಹಳಿ ಆಚೆ ಓದಿಸಲು ಕಳುಹಿಸುವುದು ಕನಸೇ ಆಗಿತ್ತು. ಅದನ್ನು ಮನಗಂಡು ವಿಶೇಷವಾಗಿ ಬಾಲಕಿಯರಿಗಾಗಿ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಹಾಗೂ ಬಾಲಕರಿಗಾಗಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯನ್ನು ಕಿಂಚಿತ್ತೂ ಚ್ಯುತಿ ಬರದಂತೆ 58 ವರ್ಷಗಳ ಕಾಲ ಮುನ್ನಡೆಸಿಕೊಂಡು ಅವರೊಂದಿಗೆ ಕೈ ಜೋಡಿಸಿದ ಇತರೆ ಕೆಲ ಮನೆತನದವರು ಸುಸಜ್ಜಿತವಾಗಿ ನಡೆಸಿಕೊಂಡು ಬರುತ್ತಿದ್ದು ಸುಮಾರು ಕೋಟಿ ರೂಪಾಯಿಗಳ ಬೆಲೆ ಬಾಳುವ ಆಸ್ತಿಯಲ್ಲಿ ಬೆಲೆ ಬರುವಂತಹ ಬದುಕನ್ನು ಕಟ್ಟಿಕೊಂಡಿರುವ ಅಜ್ಜಿಯರು, ಮಕ್ಕಳು, ಮೊಮ್ಮಕ್ಕಳು ಈ ಶಾಲೆಯಲ್ಲಿ ಓದಿ ಅಕ್ಕಮಹಾದೇವಿಯವರ ನುಡಿಯಂತೆ 'ನಿಮ್ಮ ಮಂಡೆಗೆ ಹೂವ ತರುವೆವಲ್ಲದೆ ಹುಲ್ಲ ತಾರೆವು' ಎಂಬುದನ್ನು ಸಾಬೀತು ಮಾಡಿತೋರಿಸಿ ಇಂದು ಸಮಾಜದ ದಶದಿಕ್ಕುಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅಂದು ಹೊತ್ತಿಸಿದ 'ಕಲ್ಯಾಣವೆಂಬ ಪ್ರಣತೆಯಲ್ಲಿ ಅಸಂಖ್ಯಾತರು ತೊಳಗಿ ಬೆಳಗುತ್ತಿದ್ದಾರೆ'.

ಹಳೇ ನಗರದ ಪ್ರದೇಶದಲ್ಲಿ ನಿಂತು ಒಂದು ಕಲ್ಲು ಒಗೆದರೆ ಅದು ಬೀಳುವ ಮನೆಯ ಅಜ್ಜಿಯೋ, ತಾಯಿಯೋ, ಮಗಳೋ-ಮೊಮ್ಮಗಳೋ ಅಕ್ಕಮಹಾದೇವಿ ಶಾಲೆಯ ತೂಕದ ಬೆಲೆ ಬಾಳುವ ಬದುಕಿಗೆ ಬೆಲೆ ಬರುವಂತೆ ಬದುಕುತ್ತಿರುವವರ ಮನೆ ಮೇಲೆ ಬೀಳುತ್ತದೆ ಎನ್ನುವುದು ಅತಿಶಯೋಕ್ತಿಯ ಮಾತಲ್ಲ.

**- ಎಂ.ಕೆ. ಬಕ್ಕಪ್ಪ,** ಸಹ ಕಾರ್ಯದರ್ಶಿ,
ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ
ದಾವಣಗೆರೆ.

## ನಕಲಿ ಕೊರೊನಾ ಟೆಸ್ಟ್ : ಬಂಧನ

**(1ನೇ ಪುಟದಿಂದ)** ನಡೆಸಿದಾಗ, ತನ್ನ ಬಳಿ ಬರುವ ರೋಗಿಗಳ ಮಾದರಿ ಪಡೆಯುತ್ತಿದ್ದ ಪರಾಶರ್, ಪರೀಕ್ಷೆ ನಡೆಸದೆಯೇ ನಕಲಿ ವರದಿಯನ್ನು ರೋಗಿಗಳ ಮೊಬೈಲ್‌ಗೆ ಕಳಿಸುತ್ತಿದ್ದ ಎಂಬುದು ಪತ್ತೆಯಾಗಿದೆ. ಸಾಕಷ್ಟು ಕೊರೊನಾ ಸೋಂಕಿತರು ಲಕ್ಷಣ ರಹಿತವಾಗಿರುವುದರಿಂದ ವೈದ್ಯನ ಕೃತ್ಯ ಬೆಳಕಿಗೆ ಬಂದಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ವರದಿಯನ್ನು ಪಿಡಿಎಫ್ ಸ್ವರೂಪದಲ್ಲಿ ವಾಟ್ಸ್‌ಆಪ್ ಮೂಲಕ ಮೊಬೈಲ್‌ಗೆ ಕಳಿಸಲಾಗುತ್ತಿತ್ತು. ಇದರಿಂದಾಗಿ ಪೋರ್ಜರಿ ಹಾಗೂ ನಕಲಿ ವರದಿ ನಡುವಿನ ವ್ಯತ್ಯಾಸ ಗುರುತಿಸುವುದು ಕಷ್ಟವಾಗಿತ್ತು ಎಂದು ಡಿಸಿಪಿ (ದಕ್ಷಿಣ) ಅತುಲ್ ಕುಮಾರ್ ಹೇಳಿದ್ದಾರೆ. ಕಳೆದ ಎರಡೂವರೆ ತಿಂಗಳಿನಿಂದ ಪ್ರತಿ ರೋಗಿಯಿಂದ 2,400 ರೂ. ಪಡೆಯುತ್ತಿದ್ದುದಾಗಿ ಹಾಗೂ 75ಕ್ಕೂ ಹೆಚ್ಚು ರೋಗಿಗಳಿಗೆ ನಕಲಿ ಕೊರೊನಾ ಟೆಸ್ಟ್ ವರದಿ ನೀಡಿರುವುದಾಗಿ ವಿಚಾರಣೆ ವೇಳೆ ಪರಾಶರ್ ಒಪ್ಪಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

## ಡ್ರಗ್ಸ್: ನಟಿ ರಾಗಿಣಿ ಬಂಧನ

**(1ನೇ ಪುಟದಿಂದ)** ಇದಲ್ಲದೆ, ಚಲನಚಿತ್ರರಂಗದ ಜೊತೆಗೆ ಉದ್ಯಮಿ ಮತ್ತು ರಾಜಕಾರಣಿ ಮಕ್ಕಳ ನಂಟಿನ ಬಗ್ಗೆಯೂ ನಟಿಯಿಂದ ಮಾಹಿತಿ ಪಡೆಯುವ ಯತ್ನ ನಡೆಸಿದ್ದಾರೆ ಎಂದು ಹೇಳಲಾಗಿದೆ.

ನಟಿ ದ್ವಿವೇದಿ ಪಾಳೆಯಲ್ಲಿ ರಾಜ್ಯದ ಇಬ್ಬರು ಸಂಸದರು, ಇಬ್ಬರು ಎಂಎಲ್‌ಎಗಳ ಮಕ್ಕಳು ಉದ್ಯಮಿದಾರರು ಹಾಗೂ ಡೆವಲಪರ್ಸ್‌ಗಳ ಮಕ್ಕಳ ದೊಡ್ಡ ಪಡೆಯೇ ಇದೆ ಎಂದು ಹೇಳಲಾಗುತ್ತಿದೆ. ರವಿಶಂಕರ್ ನೀಡಿದ ಮಾಹಿತಿಯನ್ನು ಆಧರಿಸಿ, ಈ ಎಲ್ಲಾ ವಿಚಾರಗಳ ಬಗ್ಗೆಯೂ ಆಕೆಯಿಂದ ಡ್ರಗ್ಸ್ ಜಾಲದ ಬಗ್ಗೆ ಕಲೆ ಹಾಕುವ ಪ್ರಯತ್ನ ಮುಂದುವರೆಸಿದ್ದಾರೆ.

ಕಳೆದ ನಾಲ್ಕು ದಿನಗಳ ಹಿಂದೆಯೇ ವಿಚಾರಣೆಗೆ ಬರುವಂತೆ ವಾಟ್ಸಾಪ್ ಮೂಲಕ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿದ್ದರೂ, ನಟಿ ವಿಚಾರಣೆಗೆ ಬಂದಿರಲಿಲ್ಲ. ಇಂದು ನ್ಯಾಯಾಲಯದ ಶೋಧನಾ ವಾರೆಂಟ್ ಪಡೆದು, ಆಕೆಯ ಮನೆ ಮೇಲೆ ಸತತ ನಾಲ್ಕು ಗಂಟೆ ದಾಳಿ ನಡೆಸಿದ ನಂತರ ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿತ್ತು.

## ಹರಿಹರ : ಇಂದು ಶಿಕ್ಷಕರ ದಿನಾಚರಣೆ

ಇಂದು ಬೆಳಿಗ್ಗೆ 10 ಗಂಟೆಗೆ ಗುರು ಭವನದಲ್ಲಿ ಶಿಕ್ಷಕರ ದಿನಾಚರಣೆ ನಡೆಯಲಿದೆ ಎಂದು ಬಿ.ಇ.ಓ ಬಸವರಾಜಪ್ಪ ತಿಳಿಸಿದ್ದಾರೆ.

ಸಮಾರಂಭವನ್ನು ಸಚಿವ ಬಿ.ಎ. ಬಸವರಾಜ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಶಾಸಕ ಎಸ್. ರಾಮಪ್ಪ ವಹಿಸಲಿದ್ದಾರೆ. ಮುಖ್ಯ ಅತಿಥಿಗಳು : ಶ್ರೀಮತಿ ದೀಪಾ ಜಗದೀಶ್, ಜಿ.ಎಂ. ಸಿದ್ದೇಶ್ವರ, ರಘು ಆಚಾರ್, ವೈ.ಎ. ನಾರಾಯಣ ಸ್ವಾಮಿ, ಮೋಹನ್ ಕೊಂಡಜ್ಜಿ, ಸಾಕಮ್ಮ ಗಂಗಾಧರ್ ನಾಯ್ಕ್, ಶೇಖರಪ್ಪ, ಶ್ರೀದೇವಿ ಮಂಜಪ್ಪ, ಹನುಮಂತರಡ್ಡಿ, ಬಿ.ಎಂ. ವಾಗೀಶ್‌ಸ್ವಾಮಿ, ನಿರ್ಮಲ ಟಿ.ಮುಕುಂದ, ಅರ್ಚನಾ ಬಸವರಾಜ್, ಹೇಮಾವತಿ ಭೀಮಪ್ಪ, ಜಯಮ್ಮ ಬಸವಲಿಂಗಪ್ಪ ಮತ್ತಿತರರು.

## ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ಎಂ.ಬಿ. ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

## ಇಂದು ಹಿಂದೂ ಮಹಾಗಣಪತಿ ವಿಸರ್ಜನೆ

ಬಾಲಕರ ಸರ್ಕಾರಿ ಪ್ರೌಢ ಶಾಲಾ ಮೈದಾನದಲ್ಲಿ ಹಿಂದೂ ಮಹಾಗಣಪತಿ ಟ್ರಸ್ಟ್ ವತಿಯಿಂದ ಪ್ರತಿಷ್ಠಾಪಿಸ ಲಾಗಿರುವ ಶ್ರೀ ಗಣಪತಿ ಮೂರ್ತಿ ಯನ್ನು ಇಂದು ವಿಸರ್ಜಿಸಲಾಗು ವುದು ಎಂದು ಟ್ರಸ್ಟ್ ಸಂಸ್ಥಾಪಕ ಜೊಳ್ಳಿ ಗುರು ತಿಳಿಸಿದ್ದಾರೆ.

## ದಾವಣಗೆರೆಗೆ ಮರು ಸೇರ್ಪಡೆಗೆ ಪ್ರಯತ್ನ

**(1ನೇ ಪುಟದಿಂದ)** ರಾಮಚಂದ್ರಪ್ಪ ಹೇಳಿದರು.

ಉಚ್ಚಂಗಿದುರ್ಗದ ಬಳಿ ಇರುವ ಹಾಲಮ್ಮನ ತೋಪಿನಲ್ಲಿ ಜಗಳೂರು ಬಿಜೆಪಿ ಘಟಕ ಹಾಗೂ ಎಸ್.ವಿ. ರಾಮಚಂದ್ರಪ್ಪನವರ ಅಭಿಮಾನಿ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಜಗಳೂರಿನ 57 ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ಭರದಿಂದ ಸಾಗಿದೆ. ಮುಂದಿನ ವರ್ಷ ನೀರು ತುಂಬಿಸುವ ಕೆಲಸವಾಗುತ್ತಿದ್ದು ಭರದ ನಾಡಿಗೆ ನೀರು ಬಂದರೆ ಜನ ಸಾಮಾನ್ಯರ ಬದುಕು ಹಸನಾಗುತ್ತದೆ ಎಂದರು.

ಉಚ್ಚಂಗಿದುರ್ಗದ ಹಾಲಮ್ಮನ ತೋಪಿನಲ್ಲಿ ಹಾಗೂ ಗುಡ್ಡದಲ್ಲಿರುವ ಉಚ್ಚಂಗೆಮ್ಮನ ದೇವಸ್ಥಾನಕ್ಕೆ ಸಾವಿರಾರು ಭಕ್ತಾದಿಗಳು ಬರುತ್ತಿದ್ದು, ಅವರಿಗೆ ಬೇಕಾಗಿರುವ ಮೂಲಭೂತ ಸೌಕರ್ಯಗಳಿಗೆ ಆದ್ಯತೆ ನೀಡಲಾಗುವುದು, ಹಾಲಮ್ಮನ ತೋಪಿನಲ್ಲಿ ಕಾಂಕ್ರೀಟ್ ರಸ್ತೆ ಹಾಗೂ ಹಳ್ಳಕ್ಕೆ ಅಡ್ಡಲಾಗಿ ಬ್ರಿಡ್ಜ್ ನಿರ್ಮಾಣದ ಕೆಲಸವನ್ನು ಶೀಘ್ರವೇ ಪ್ರಾರಂಭಿಸಲಾಗುವುದು. ಮುಂಬರುವ ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಮತ್ತೊಮ್ಮೆ ಬಿಜೆಪಿಗೆ ಮತ ನೀಡುವ ಮೂಲಕ ಸ್ಥಳೀಯ ಚುನಾವಣೆಯಲ್ಲಿ ಜಯಭೇರಿ ಭಾರಿಸಿದರೆ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗುತ್ತವೆ ಎಂದ ಅವರು, ಈ ಅವಧಿಯಲ್ಲಿ ನನಗೆ ಮಂತ್ರಿ ಸ್ಥಾನಮಾನ ಸಿಗುವುದು ಅನುಮಾನವಾಗಿದ್ದು, ಮುಂದಿನ ಬಾರಿ ಮತ್ತೊಮ್ಮೆ ಗೆದ್ದು ನಾನು ಮಂತ್ರಿಯಾಗಿ ಹೆಚ್ಚಿನ ಅಭಿವೃದ್ಧಿ ಕೆಲಸ ಮಾಡುತ್ತೇನೆ ಎಂದರು.

ತಾಲ್ಲೂಕು ಪಂಚಾಯಿತಿ ಸ್ಥಾಯಿ ಸಮಿತಿ ಅಧ್ಯಕ್ಷ ಕೆಂಚನಗೌಡ್ರು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸೊಕ್ಕೆ ನಾಗರಾಜ್ ಮಾತನಾಡಿದರು.

ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ಜಿಲ್ಲಾ ಪಂಚಾಯಿತಿ ಸದಸ್ಯ ಡಿ. ಸಿದ್ದಪ್ಪ, ಮುಖಂಡರಾದ ಫಣಿಯಾಪುರ ಲಿಂಗರಾಜ್, ಬಾನಳ್ಳಿ ಕೆಂಚನಗೌಡ್ರು, ಡಿ.ಎಸ್. ಹಾಲಪ್ಪ, ರವಿಗೌಡ್ರು, ಅಣಜಿಗೇರಿ ಭರಮನಗೌಡ್ರು, ಗಿರಿಯಪ್ಪ, ಕೆಂಚಪ್ಪ, ಎಸ್.ಕೆ. ವಿಶ್ವನಾಥಯ್ಯ, ಬಸವರಾಜ್, ನಂದೆಮ್ಮ, ಜಯಮ್ಮ, ನಿರ್ಮಲ, ಬಸಮ್ಮ, ತೌಡೂರು ಕೆ. ಮಂಜುನಾಥಯ್ಯ, ಕ್ಯಾರಕಟ್ಟೆ ಶಿವಯೋಗಿ, ಹೊಸಕೋಟೆ ಶರಣಪ್ಪ, ಜಾತಪ್ಪ ಪೂಜಾರ್ ಹುಚ್ಚಪ್ಪ, ಅತಾವುಲ್ಲಾ, ಈರಣ್ಣ ವಿಜಯ ಕುಮಾರ್, ರಿಯಾಜ್ ಯುವರಾಜ್, ವೀರೇಶ, ಉಮೇಶ, ಅಂಜಿನಪ್ಪ ಸೇರಿದಂತೆ ಇತರರು ಇದ್ದರು.

## ಮಾರ್ಗಸೂಚಿ ಜಾರಿಗೆ ತರಲು ವಿಚಾರಣೆ

**(1ನೇ ಪುಟದಿಂದ)** ಅರ್ಜಿ ದಾಖಲಿಸಲಾಗಿದೆ. ಅರ್ಜಿಯನ್ನು ವಿಚಾರಣೆಗೆ ಸ್ವೀಕರಿಸಿರುವ ಪೀಠ, ಸುಪ್ರೀಂ ಕೋರ್ಟ್ ಪ್ರಧಾನ ಕಾರ್ಯದರ್ಶಿಗೆ ನೋಟಿಸ್ ಕಳಿಸಿದೆ.

ಮಾರ್ಗಸೂಚಿಗಳ ಪ್ರಕಾರ ಹಿರಿಯ ವಕೀಲರೆಂಬ ಮಾನ್ಯತೆ ನೀಡುವ ಪ್ರಕ್ರಿಯೆ ಆರಂಭಿಸುವಂತೆ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಅರ್ಜಿ ದಾಖಲಿಸಿದ್ದರು.

ಕೊರೊನಾ ಹಿನ್ನೆಲೆಯಲ್ಲಿ ಆನ್‌ಲೈನ್ ಮೂಲಕ ಸುಪ್ರೀಂ ಕೋರ್ಟ್ ವಿಚಾರಣೆ ನಡೆಯುತ್ತಿದೆ. ಅದೇ ರೀತಿ ಹಿರಿಯ ವಕೀಲರ ಮಾನ್ಯತೆ ನೀಡುವುದನ್ನು ಆನ್‌ಲೈನ್ ಮೂಲಕ ನಡೆಸಬೇಕೆಂದು ಅರ್ಜಿಯಲ್ಲಿ ಕೋರಲಾಗಿದೆ.

ಆಗಸ್ಟ್ 2018ರಂದು ಪ್ರಕಟಿಸಲಾದ ಮಾರ್ಗ ಸೂಚಿಗಳ ಪ್ರಕಾರ ಸುಪ್ರೀಂ ಕೋರ್ಟ್ ರಿಜಿಸ್ಟ್ರಿಯು ಈ ಪ್ರಕ್ರಿಯೆಗಳನ್ನು ಜನವರಿ 2019ರಿಂದ ಆರಂಭಿಸಬೇಕಿತ್ತು. ಇದುವರೆಗೂ ನಾಲ್ಕು ಬಾರಿ ಹಿರಿಯ ವಕೀಲರನ್ನು ಗುರುತಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕಿತ್ತು. ಆದರೆ, ಆಗಸ್ಟ್ 6, 2018ರಿಂದಲೇ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ಅರ್ಜಿದಾರರು ಹೇಳಿದ್ದಾರೆ.

## ಭಾರೀ ಮಳೆ : ಹಾನಿ ಸ್ಥಳಗಳಿಗೆ ಉಪತಹಶೀಲ್ದಾರ್ ಭೇಟಿ

**ಮಲೇಬೆನ್ನೂರು**

ಮಲೇಬೆನ್ನೂರು, ಸೆ.4- ಬುಧವಾರ ಸಂಜೆ ಸುರಿದ ಭಾರೀ ಮಳೆಯಿಂದಾಗಿ ಹರಳಹಳ್ಳಿಯಲ್ಲಿ 3, ಕೊಮಾರನಹಳ್ಳಿ ಒಂದು ಮನೆಗೆ ಭಾಗಶಃ ಹಾನಿಯಾಗಿರುತ್ತದೆ.

ಸಂಕ್ಲೀಪುರದಲ್ಲಿ ಸುಮಾರು 60 ಎಕರೆ ಭತ್ತದ ಗದ್ದೆ ನೀರಿನಲ್ಲಿ ಮುಳುಗಡೆಯಾಗಿದ್ದು, ಸಂಕ್ಲೀಪುರ-ಮುಕ್ತೇನಹಳ್ಳಿ ಸಂಪರ್ಕ ರಸ್ತೆ ಹಳ್ಳದ ನೀರಿನಲ್ಲಿ ಜಲಾವೃತಗೊಂಡಿದೆ.

ಹಾನಿ ಸ್ಥಳಗಳಿಗೆ ಶುಕ್ರವಾರ ಉಪತಹಶೀಲ್ದಾರ್ ಆರ್.ರವಿ, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಗ್ರಾಮ ಸಹಾಯಕ ರಾಜಪ್ಪ ಭೇಟಿ ನೀಡಿ ಪರಿಶೀಲಿಸಿ, ಜಿಲ್ಲಾಧಿಕಾರಿಗಳಿಗೆ ವರದಿ ನೀಡುವುದಾಗಿ ತಿಳಿಸಿದರು.

ರೈತರಾದ ನಿಂಗಪ್ಪ ವೀರೇಶ್, ನಿಂಗನಗೌಡ ಪಾಟೀಲ್, ರಾಮನ ಗೌಡ, ಪ್ರಭು, ಕರಿಬಸಪ್ಪ ಈ ವೇಳೆ ಹಾಜರಿದ್ದರು.

## ಮಾಯಕೊಂಡ : ಬಿಜೆಪಿ ಮೋರ್ಚಾ ಅಧ್ಯಕ್ಷರ ನೇಮಕ

ದಾವಣಗೆರೆ, ಸೆ.4- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಮೋರ್ಚಾ ಅಧ್ಯಕ್ಷರುಗಳನ್ನು ನೇಮಕ ಮಾಡಲಾಗಿದೆ. ಎಸ್ಸಿ ಮೋರ್ಚಾ ಅಧ್ಯಕ್ಷ- ಹನುಮಂತಪ್ಪ ಬಲ್ಲೂರು, ಎಸ್ಟಿ ಮೋರ್ಚಾ ಅಧ್ಯಕ್ಷ- ಟಿ.ಎಂ. ಹನುಮಪ್ಪ ನಲ್ಕುಂದ, ಓಬಿಸಿ ಮೋರ್ಚಾ ಅಧ್ಯಕ್ಷ- ಮಲ್ಲಿಕಾರ್ಜುನ ದೊಡ್ಡಘಟ್ಟ, ರೈತ ಮೋರ್ಚಾ ಅಧ್ಯಕ್ಷ- ಬಿ.ಆರ್. ರುದ್ರಪ್ಪ ಕ್ಯಾತನಹಳ್ಳಿ ಮತ್ತು ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಅಕ್ಕಮಹಾದೇವಮ್ಮ ಸುಲ್ತಾನಿಪುರ ನೇಮಕಗೊಂಡಿದ್ದಾರೆ ಎಂದು ಅಧ್ಯಕ್ಷ ಎಂ. ದೇವೇಂದ್ರಪ್ಪ ಶ್ಯಾಗಲೆ ತಿಳಿಸಿದ್ದಾರೆ.

## ಮಾಯಕೊಂಡ : ಬಿಜೆಪಿ ಮಂಡಲ ಸಮಿತಿಗೆ ಪದಾಧಿಕಾರಿಗಳ ಆಯ್ಕೆ

ದಾವಣಗೆರೆ, ಸೆ.4- ಮಾಯಕೊಂಡ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಂಡಲ ಸಮಿತಿ ಅಧ್ಯಕ್ಷರಾಗಿ ಎಂ. ದೇವೇಂದ್ರಪ್ಪ ಶ್ಯಾಗಲೆ ನೇಮಕಗೊಂಡಿದ್ದಾರೆ.

ಉಪಾಧ್ಯಕ್ಷರಾಗಿ ಮಹೇಶ್ವರಪ್ಪ ಉಳಪಿನಕಟ್ಟೆ, ಕರಿಯಮ್ಮ ಕುಬೇರಪ್ಪ ಲೋಕಿಕೆರೆ, ಶೇಖರಪ್ಪ ದಾಗಿನಕಟ್ಟೆ, ಜಯಪ್ರಕಾಶ್ ಮಾಯಕೊಂಡ, ಶೈಲಮ್ಮ ಬಸವರಾಜಪ್ಪ ಬಾಡ, ನಿಜಲಿಂಗಪ್ಪ ಕಾರಿಗನೂರು, ಪ್ರಧಾನ ಕಾರ್ಯದರ್ಶಿಗಳಾಗಿ ಡಿ.ಎನ್. ಮಹಾಬಲೇಶ ಹಿಂಡಸಕಟ್ಟೆ ಹಾಗೂ ಓಂಕಾರಪ್ಪ ಜಿ.ಬಿ. ಕರಿಲಕ್ಕೇನಹಳ್ಳಿ ನೇಮಕಗೊಂಡಿದ್ದಾರೆ.

ಕಾರ್ಯದರ್ಶಿಗಳಾಗಿ ರೇಣುಕಮ್ಮ ನಾಗರಾಜ ಚಿರಡೋಣಿ, ಶಿವಕುಮಾರ್ ಪವಾಡರಂಗವ್ವನಹಳ್ಳಿ, ಶ್ರೀನಿವಾಸ ಹೊನ್ನೂರು, ಶಿವಯ್ಯ ಹೆಮ್ಮನಬೇತೂರು, ದಿನೇಶ್ ತುಂಬಿಗೆರೆ, ಸುನೀತಾ ಶ್ರೀನಿವಾಸ ಗುಮ್ಮನೂರು ಹಾಗೂ ಕಾರ್ಯಾಲಯ ಕಾರ್ಯದರ್ಶಿ ಲಿಂಗರಾಜ ಐಗೂರು, ಖಜಾಂಚಿ ಹನುಮಂತಪ್ಪ ಮೆಳ್ಳೇಕಟ್ಟೆ, ಮಾಧ್ಯಮ ಪ್ರಮುಖ್ ಎಂ.ಎನ್. ಸಂತೋಷ ಅರಲಿಪುರ ಹಾಗೂ ಸಾಮಾಜಿಕ ಜಾಲತಾಣಕ್ಕೆ ಹೆಚ್.ಎಸ್. ರಮೇಶ್ ತ್ಯಾವಣಿಗೆ ನೇಮಕಗೊಂಡಿದ್ದಾರೆ.

## ಶ್ರೀ ಬಸವೇಶ್ವರ ಶಾಲೆಯಲ್ಲಿಂದು ಪ್ರಶಸ್ತಿ ಪ್ರದಾನ

ಶ್ರೀ ಬಸವೇಶ್ವರ ಶಾಲೆ, ಮಕ್ಕಳ ಲೋಕದ ಸಂಯುಕ್ತಾಶ್ರಯದಲ್ಲಿ 'ಶಿಕ್ಷಕ ಕುಲರತ್ನ' ಪ್ರಶಸ್ತಿ ಪ್ರದಾನ ನಡೆಯಲಿದೆ. ಅಧ್ಯಕ್ಷತೆ : ಉಮೇಶ್. ಪ್ರಶಸ್ತಿ ಪ್ರದಾನ : ಮಲ್ಲೇಶಿ. ಉಪನ್ಯಾಸ : ಕೆ.ಎನ್. ಸ್ವಾಮಿ. ಮಕ್ಕಳ ಲೋಕದ ಅಧ್ಯಕ್ಷ ಎನ್. ಪುಟ್ಟಾನಾಯ್ಕ, ಗೌರವಾಧ್ಯಕ್ಷ ಡಾ. ಬಿ.ಎಸ್. ನಾಗಪ್ರಕಾಶ್ ಮಾರ್ಗದರ್ಶನದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ.

**ಅಭಿನಂದನೆಗಳು**



ದಾವಣಗೆರೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿರುವ ನಮ್ಮೆಲ್ಲರ ನೆಚ್ಚಿನ ಶಿಕ್ಷಕರಾದ
**ಶ್ರೀ ಬಿ.ಎಸ್. ಪದ್ದಪ್ಪ**
ವೃತ್ತಿ ಶಿಕ್ಷಣ ಶಿಕ್ಷಕರು, ಶ್ರೀ ಪಿ ಮತ್ತು ಬಿ. ಬಸವನಗೌಡ್ರು ಪ್ರೌಢಶಾಲೆ, ಬೂದಿಹಾಳು ಇವರಿಗೆ ಹಾರ್ದಿಕ ಅಭಿನಂದನೆಗಳು.
ವಿದ್ಯಾಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು, ಶಾಲೆಯ ಸಿಬ್ಬಂದಿ ವರ್ಗದವರು ಹಾಗೂ ಗ್ರಾಮಸ್ಥರು, ಬೂದಿಹಾಳು



**ಶಿಕ್ಷಕರ ದಿನಾಚರಣೆಯ ಹಾರ್ದಿಕ ಶುಭಾಶಯಗಳು**
**ಡಾ॥ ಸರ್ವಪಲ್ಲಿ ರಾಧಾಕೃಷ್ಣನ್**
ಜನ್ಮ ದಿನಾಚರಣೆ ಪ್ರಯುಕ್ತ ನಾಡಿನ ಸಮಸ್ತ ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆಯ ಹಾರ್ದಿಕ ಶುಭಾಶಯಗಳು...



**ಸಿ. ಜಯಣ್ಣ,** ಕೊಕ್ಕನೂರು
ಮುಖ್ಯ ಶಿಕ್ಷಕರು, ಶ್ರೀ ಬೀರಲಿಂಗೇಶ್ವರ ಬಾಲಕರ ಪ್ರೌಢಶಾಲೆ, ಮಲೇಬೆನ್ನೂರು, ಅಧ್ಯಕ್ಷರು, ತಾ. ಮುಖ್ಯ ಶಿಕ್ಷಕರ ಹಾಗೂ ಉಪ ಪ್ರಾಂಶುಪಾಲರ ಸಂಘ, ಹರಿಹರ.

**ಅಭಿನಂದನೆಗಳು**
ದಾವಣಗೆರೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿರುವ ಶಾಮನೂರಿನ
**ಶ್ರೀ ಬಿ.ಎಸ್. ಪದ್ದಪ್ಪ**
ಅವರಿಗೆ ಹಾರ್ದಿಕ ಅಭಿನಂದನೆಗಳು.



ಜಿ. ಪರಮೇಶ್, ಎಸ್. ಸಿದ್ದಪ್ಪ, ಎನ್.ಆರ್. ಶಿಂಧೆರಾಮು
**ಶ್ರೀ ಭುವನೇಶ್ವರಿ ಕಲಾ ಸಂಘ, ಶಾಮನೂರು.**

**ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ., ದಾವಣಗೆರೆ**

ಈ ಮೂಲಕ 2ನೇ ಹಂತದ ನಿವೇಶನದಾರರಿಗೆ ತಿಳಿಯಪಡಿಸುವುದೇನೆಂದರೆ, ಈಗಾಗಲೇ ತಮಗೆ ನೋಟಿಸ್ ಕಳುಹಿಸಿದ್ದು, ದಿನಾಂಕ 06.09.2020 ರಂದು
**ನೋಟಿಸ್‌ನಲ್ಲಿ ತಿಳಿಸಿರುವಂತೆ 'ಲಾಟರಿ' ಕಾರ್ಯಕ್ರಮವು**
ಸರ್ಕಾರಿ ನೌಕರರ ಭವನ, ನಿಜಲಿಂಗಪ್ಪ ಬಡಾವಣೆ ಇಲ್ಲಿ ಇರುತ್ತದೆ.
ಪ್ರಯುಕ್ತ ತಪ್ಪದೇ ಹಾಜರಾಗಿ ಕಾರ್ಯಕ್ರಮ ಯಶಸ್ವಿಗೊಳಿಸಲು ಕೋರಿದೆ.

| ಶಿವಯೋಗಿ | ಹೆಚ್.ಎಂ.ರೇವಣಸಿದ್ದಪ್ಪ | ಎನ್.ಡಿ.ಮಂಜು | ಎಂ.ಡಿ.ನೀಲಗಿರಿಯಪ್ಪ |
|---|---|---|---|
| ಕಾರ್ಯದರ್ಶಿ | ಗೌರವಾಧ್ಯಕ್ಷರು | ಉಪಾಧ್ಯಕ್ಷರು | ಅಧ್ಯಕ್ಷರು |

**ಕರ್ನಾಟಕ ಗೃಹ ಮಂಡಳಿ**
4ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಸಂಖ್ಯೆ:ಕಗೃಮಂ/ಉಪ್ರವ್ಯ(ಗ್ರಾಸೇ)/ಹಂಚಿಕೆ/ದಾವಣಗರೆ/ಕುಂದವಾಡ/ಲಾಟರಿ/2020-2021 ದಿನಾಂಕ:03.09.2020

**ದಾವಣಗೆರೆ ನಗರದ ಕುಂದವಾಡ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿರುವ ಎಲ್.ಐ.ಜಿ ವರ್ಗದ ನಿವೇಶನಗಳ ಹಂಚಿಕೆ ಸಬಂಧ ಪತ್ರಿಕಾ ಪ್ರಕಟಣೆ**

ದಾವಣಗೆರೆ ನಗರದ ಕುಂದವಾಡ ಗ್ರಾಮ ಸರ್ವೆ ನಂ.92ರ 13 ಎಕರೆ ಪ್ರದೇಶದಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಲಾಗಿರುವ ಎಲ್.ಐ.ಜಿ.ವರ್ಗದ ಮಧ್ಯಂತರ ನಿವೇಶನಗಳನ್ನು **ದಿನಾಂಕ: 25.04.2020**ರ ಲಾಟರಿ ಹಂಚಿಕೆ ಸಮಯದಲ್ಲಿ ತಿಳಿಸಿದಂತೆ ಅಭಿವೃದ್ಧಿಪಡಿಸಲಾಗಿದ್ದು, **ದಿನಾಂಕ 07.06.2020**ರ ಪತ್ರಿಕಾ ಪ್ರಕಟಣೆಯಂತೆ ತಾತ್ಕಾಲಿಕ ಎಲ್.ಐ.ಜಿ ವರ್ಗದ ಅರ್ಜಿದಾರರ ಅರ್ಹತಾ ಪಟ್ಟಿಯನ್ನು ಪ್ರಕಟಿಸಿ ಅಕ್ಷೇಪಣೆ ಸಲ್ಲಿಸಲು ಕೊನೆಯ **ದಿನಾಂಕ: 16.06.2020** ಅಗಿರುತ್ತದೆ, ಪ್ರಕಟಣೆಯಂತೆ ಅಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಅರ್ಹತಾ ಪಟ್ಟಿಯನ್ನು ಪ್ರಕಟಿಸಿ ಮತ್ತು ಲಾಟರಿ ದಿನಂಕವನ್ನು ಈ ಕೆಳಕಂಡಂತೆ ಪ್ರಕಟಿಸಲಾಗಿದೆ.

| ಕ್ರ. ಸಂ. | ಬಡಾವಣೆ | ಅರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ | ಲಾಟರಿ ನಡೆಯುವ ದಿನಾಂಕ ಮತ್ತು ಸ್ಥಳ ಹಾಗೂ ಸಮಯ |
|---|---|---|---|
| 1. | ದಾವಣಗೆರೆ – ಕುಂದವಾಡ ಬಡಾವಣೆ ಸರ್ವೆ ನಂ.92ರಲ್ಲಿ ಹೊಸದಾಗಿ ಅಭಿವೃದ್ಧಿಪಡಿಸಿರುವ ಎಲ್.ಐ.ಜಿ ನಿವೇಶನಗಳು | 05.09.2020 | ಕರ್ನಾಟಕ ಗೃಹ ಮಂಡಳಿ, ಕೇಂದ್ರ ಕಛೇರಿ 4ನೇ ಮಹಡಿ ಸಭಾಂಗಣ, ಬೆಂಗಳೂರು. **ಲಾಟರಿ ದಿನಾಂಕ: 14.09.2020** |
| ಲಭ್ಯವಿರುವ ಅಂದಾಜು ಎಲ್.ಐ.ಜಿ ನಿವೇಶನಗಳು 233, ಮಂಡಳಿ ದರ ಪ್ರ.ಚ.ಅಡಿಗೆ **ರೂ.600/-** | | | |

ಆರಂಭಿಕ ಠೇವಣಿಯನ್ನು ಮಂಡಳಿಗೆ ಪಾವತಿ ಮಾಡಿ ಆರಂಭಿಕ ಠೇವಣಿ ಮರುಪಾವತಿ ಪಡೆಯದ ಅರ್ಜಿದಾರರ ಅರ್ಜಿಯನ್ನು ಕರ್ನಾಟಕ ಗೃಹ ಮಂಡಳಿ ಹಂಚಿಕೆ 1983 ನಿಯಮಾವಳಿ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಈ ಹಿಂದೆ ದಾವಣಗೆರೆ ಕುಂದವಾಡ ಬಡಾವಣೆಗೆ **ದಿನಾಂಕ: 29.07.2010**ರ ಸಾರ್ವಜನಿಕ ಪ್ರಕಟಣೆಯಂತೆ ಆರಂಭಿಕ ಠೇವಣಿ ಸಂದಾಯ ಮಾಡಿರುವ ಎಲ್.ಐ.ಜಿ ವರ್ಗದ ಅರ್ಜಿಗಳನ್ನು ಪ್ರವರ್ಗವಾರು ಅರ್ಜಿಗಳನ್ನು ವಿಂಗಡಿಸಿ ಲಾಟರಿ ಮೂಲಕ ಹಂಚಿಕೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮಂಡಳಿಯ ವೆಬ್‌ಸೈಟ್ **www.karnatakahousing.com** ಪರಿಶೀಲಿಸುವುದು.

ಸಹಿ/- ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.


DIPR/DDUKC/1015/2019-20

**ಹೃದಯಪೂರ್ವಕ ಅಭಿನಂದನೆಗಳು**



ದಾವಣಗೆರೆ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿಯ ಸದಸ್ಯರಾಗಿ ನೇಮಕಗೊಂಡಿರುವ
**ಎಸ್. ಪರಮೇಶ್ವರಪ್ಪ ಬಣಕಾರ**
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.
◆ ಮಧುಮತಿ ಅಕ್ಕನವರು ◆ ವನಜಾಕ್ಷಿ ಪರಮೇಶ್ವರ
◆ ಮಂಜು ◆ ಸುನಂದಕ್ಕ ◆ ಸುಗಣರಾಜ್ ◆ ಭಾರತಿ
◆ ಅಂಬಿಕಾ ◆ ಆಶಾ ◆ ಚೇತನ ನವಲೆ ◆ ಸುಮಕ್ಕ ನವಲೆ

**ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ, ದಾವಣಗೆರೆ.**
**ಸರ್ವರಿಗೂ ಶಿಕ್ಷಕರಿಗೂ ಶಿಕ್ಷಕರ ದಿನಾಚರಣೆಯ ಶುಭಾಶಯಗಳು**



ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ ಮತ್ತು ಶಿಕ್ಷಕರ ದಿನಾಚರಣೆ ಅಂಗವಾಗಿ 2020-21 ನೇ ಸಾಲಿಗೆ ಕೊಡಮಾಡುವ ಜಿಲ್ಲಾ ಉತ್ತಮ ಶಿಕ್ಷಕರ ಪ್ರಶಸ್ತಿಯನ್ನು ಪಡೆಯಲಿರುವ ದಾವಣಗೆರೆ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕಿರಿಯ, ಹಿರಿಯ ಪ್ರಾಥಮಿಕ ಶಾಲಾ ಹಾಗೂ ಪದವಿ ಪೂರ್ವ/ಪ್ರೌಢಶಾಲೆಯ 23 ಶಿಕ್ಷಕ , ಶಿಕ್ಷಕಿಯರಿಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘದ ವತಿಯಿಂದ ಅಧ್ಯಕ್ಷರು / ಉಪಾಧ್ಯಕ್ಷರು, ನಿರ್ದೇಶಕರು, ವಿಶೇಷ ಆಹ್ವಾನಿತರು ಹಾಗೂ ಸಿಬ್ಬಂದಿಯವರಿಂದ ಅಭಿನಂದನೆಗಳು.

**ಪ್ರವೇಶ ಪ್ರಕಟಣೆ 2020-21**




**ಎಸ್.ಎಲ್. ಪದವಿ ಪೂರ್ವ ಕಾಲೇಜ್**
ಎಸ್. ನಿಜಲಿಂಗಪ್ಪ ಬಡಾವಣೆ, ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ದಾವಣಗೆರೆ-4.
2020-21ನೇ ಶೈಕ್ಷಣಿಕ ಸಾಲಿಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಈ ಕೆಳಕಂಡ ವಿಭಾಗಗಳಿಗೆ ಪ್ರವೇಶಾವಕಾಶವಿರುತ್ತದೆ.
**ವಿಜ್ಞಾನ ವಿಭಾಗ -PCMB, ವಾಣಿಜ್ಯ ವಿಭಾಗ -ABES**
**ಕಲಾ ವಿಭಾಗ - HEPS, HEPG, HEKS**
ದಾಖಲಾತಿಗಾಗಿ ಅರ್ಜಿ ಪಡೆಯಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :
**Arts : 94802 25792, Commerce : 99640 05949**
**Science: 99167 27380, 08192 223757**
ಸಹಿ/- ಕಾರ್ಯದರ್ಶಿ ಸಹಿ/- ಪ್ರಾಂಶುಪಾಲರು

**ವೀರೇಶ್ ಬಿ. ಬಿರಾದಾರ್‌ಗೆ ಗೌರವ ಡಾಕ್ಟರೇಟ್**
**ಹಾರ್ದಿಕ ಅಭಿನಂದನೆಗಳು**



ವಿನಾಯಕ ಕಾನ್ವೆಂಟ್ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್, ವಿನಾಯಕ ಪಬ್ಲಿಕ್ ಸ್ಕೂಲ್‌ನ ಕಾರ್ಯದರ್ಶಿಗಳಾದ
**ವೀರೇಶ್ ಬಿ. ಬಿರಾದಾರ್** ಅವರಿಗೆ
**Common Wealth Vocational University Tongatapu, Kingdom of Tonga**
ದಿಂದ ಇವರ ಸಾಧನೆ, ವಿದ್ಯಾರ್ಹತೆ ಪರಿಗಣಿಸಿ ಗೌರವ ಡಾಕ್ಟರೇಟ್ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಇವರಿಗೆ ಹಾರ್ದಿಕ ಅಭಿನಂದನೆಗಳು.
**ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗ**




## ಮಲೇಬೆನ್ನೂರು ಹೋಬಳಿಯಲ್ಲಿ 2 ದಿನಗಳಲ್ಲಿ 19 ಜನರಿಗೆ ಸೋಂಕು

ಮಲೇಬೆನ್ನೂರು, ಸೆ.4- ಹೋಬಳಿಯಲ್ಲಿ ಶುಕ್ರವಾರ 6 ಜನರಿಗೆ, ಗುರುವಾರ 13 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದೆ.

ಶುಕ್ರವಾರ ಹೊಳೆಸಿರಿಗೆರೆಯಲ್ಲಿ ಇಬ್ಬರಿಗೆ, ಕೊಮಾರನಹಳ್ಳಿಯಲ್ಲಿ ಇಬ್ಬರಿಗೆ, ಮಲೇಬೆನ್ನೂರು, ಕೆ.ಎನ್.ಹಳ್ಳಿಯಲ್ಲಿ ತಲಾ ಒಬ್ಬರಿಗೆ ಗುರುವಾರ ಮಲೇಬೆನ್ನೂರಿನಲ್ಲಿ ಇಬ್ಬರಿಗೆ, ನಂದಿಗುಡಿಯಲ್ಲಿ ಮೂವರಿಗೆ, ಭಾಸ್ಕರ್‌ರಾವ್ ಕ್ಯಾಂಪ್‌ನಲ್ಲಿ ಇಬ್ಬರಿಗೆ, ಉಕ್ಕಡಗಾತ್ರಿಯಲ್ಲಿ ಇಬ್ಬರಿಗೆ, ಹೊಸಳ್ಳಿ, ಬಿಳಸನೂರು, ವಾಸನ, ಹರಳಹಳ್ಳಿ ಗ್ರಾಮಗಳಲ್ಲಿ ತಲಾ ಒಬ್ಬರಿಗೆ ಸೋಂಕು ಕಾಣಿಸಿಕೊಂಡಿದೆ ಎಂದು ಉಪತಹಶೀಲ್ದಾರ್ ಆರ್.ರವಿ ತಿಳಿಸಿದ್ದಾರೆ.

**ಪೌರ ಕಾರ್ಮಿಕರಿಗೆ ಟೆಸ್ಟ್ :** ಪೌರಾಡಳಿತ ನಿರ್ದೇಶನಾಲಯದ ಸೂಚನೆಯಂತೆ ಇಲ್ಲಿನ ಪುರಸಭೆಯ ಎಲ್ಲಾ ಪೌರ ಕಾರ್ಮಿಕರಿಗೆ ಶುಕ್ರವಾರ ಕೋವಿಡ್ ಟೆಸ್ಟ್ ಮಾಡಿಸಲಾಯಿತು.

ಮುಖ್ಯಾಧಿಕಾರಿ ಶ್ರೀಮತಿ ರುಕ್ಮಿಣಿ, ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ನೌಷಾದ್ ಈ ವೇಳೆ ಹಾಜರಿದ್ದರು.

## ಹರಿಹರದಲ್ಲಿ ಉತ್ತಮವಾದ ಮಳೆ



ಹರಿಹರ, ಸೆ.4- ನಗರದಲ್ಲಿ ಇಂದು ಬೆಳಿಗ್ಗೆಯಿಂದ ಸತತವಾಗಿ ಉತ್ತಮವಾದ ಮಳೆ ಬೀಳುತ್ತಿರುವುದರಿಂದ ರೈತರ ಮುಖದಲ್ಲಿ ಮಂದಹಾಸ ಮೂಡಿದೆ.

ನಗರದ ರಸ್ತೆಯ ಮಧ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಇರುವ ಗುಂಡಿಗಳು ಮಳೆ ನೀರಿನಿಂದ ತುಂಬಿ ವಾಹನ ಸಂಚಾರಕ್ಕೆ ಅಡೆತಡೆಯುಂಟಾಗಿತ್ತು

ಕೆಲ ಬಡಾವಣೆಗಳಲ್ಲಿ ಚರಂಡಿಯಲ್ಲಿ ಕಸ ಕಡ್ಡಿ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಚರಂಡಿ ನೀರು ಸರಾಗವಾಗಿ ಹರಿಯದೇ ಮನೆಗಳಿಗೆ ನೀರು ನುಗ್ಗಿತ್ತು. ತಾಲ್ಲೂಕಿನ ಹರಳಹಳ್ಳಿ ಗ್ರಾಮದಲ್ಲಿ 3 ಪಕ್ಕಾ ಮನೆಗಳಿಗೆ ಭಾಗಶಃ ಹಾನಿಯಾಗಿ ಸುಮಾರು 90 ಸಾವಿರ ನಷ್ಟ ಹಾಗೂ ಕೊಮಾರನಹಳ್ಳಿ ಗ್ರಾಮದಲ್ಲಿ ಕಚ್ಚಾ ಮನೆ ಭಾಗಶಃ ಹಾನಿಯಿಂದ 25 ಸಾವಿರ ರೂಪಾಯಿ ಸೇರಿ ಒಟ್ಟು 1 ಲಕ್ಷದ 15 ಸಾವಿರ ರೂಪಾಯಿ ಹಾನಿಯಾಗಿದೆ.

ತಾಲ್ಲೂಕಿನ ಹಲವಾರು ಗ್ರಾಮಗಳಲ್ಲಿ ಭತ್ತದ ಗದ್ದೆಗಳು ಜಲಾವೃತವಾಗಿದ್ದು, ಜೊತೆಯಲ್ಲಿ ನೂರಾರು ಎಕರೆ ಮೆಕ್ಕೆಜೋಳ ಬೆಳೆಗಳಿಗೆ ಹಾನಿಯಾಗಿ ರುವುದರಿಂದ ರೈತರು ಸಂಕಷ್ಟದ ಸ್ಥಿತಿ ತಲುಪಿದ್ದಾರೆ. ಸತತವಾಗಿ ಮಳೆ ಬೀಳುವ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರು ಕತ್ತಲೆಯಲ್ಲಿ ಕಾಲ ಕಳೆಯುತ್ತಿದ್ದಾರೆ.

# ದೇಶದಲ್ಲಿ 40 ಲಕ್ಷ ದಾಟಿದ ಸೋಂಕಿತರು

**ಕೊರೊನಾ ಸೋಂಕಿನಲ್ಲಿ 2ನೇ ಸ್ಥಾನದಲ್ಲಿ ಭಾರತ**

ನವದೆಹಲಿ, ಸೆ. 4 – ದೇಶದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 40 ಲಕ್ಷದ ಗಡಿ ದಾಟಿದೆ. ಸೋಂಕಿತರ ಸಂಖ್ಯೆ 30 ಲಕ್ಷದ ಗಡಿ ದಾಟಿದ 13 ದಿನಗಳಲ್ಲೇ ಹತ್ತು ಲಕ್ಷದಷ್ಟು ಹೊಸ ಸೋಂಕಿತರು ಕಂಡು ಬಂದಿದ್ದಾರೆ. ಇದೇ ವೇಳೆ ಚೇತರಿಸಿಕೊಂಡವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗುತ್ತಿದ್ದು, ಇದುವರೆಗೂ ಒಟ್ಟಾರೆ 31,06,921 ಜನರು ಸೋಂಕಿನಿಂದ ಚೇತರಿಸಿಕೊಂಡಿದ್ದಾರೆ.

ಕೇಂದ್ರ ಸಚಿವಾಲಯ ಇಂದು ಪ್ರಕಟಿಸಿದ ವರದಿ ಪ್ರಕಾರ ದೇಶದಲ್ಲಿ ಸೋಂಕಿತರ ಸಂಖ್ಯೆ 39.36 ಲಕ್ಷ. ರಾಜ್ಯಗಳು ರಾತ್ರಿ ವೇಳೆಗೆ ಪ್ರಕಟಿಸಿರುವ ಸೋಂಕಿತರ ಸಂಖ್ಯೆಯನ್ನು ಪರಿಗಣಿಸಿದಾಗ ಒಟ್ಟು ಸೋಂಕಿತರ ಸಂಖ್ಯೆ 40,10,877 ಆಗಿದೆ ಎಂದು ಪಿಟಿಐ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಅಮೆರಿಕ ಹಾಗೂ ಬ್ರೆಜಿಲ್ ನಂತರ ಭಾರತ ಅತಿ ಹೆಚ್ಚು ಕೊರೊನಾ ಸೋಂಕಿತರನ್ನು ಹೊಂದಿದ ದೇಶವಾಗಿದೆ. ಅಮೆರಿಕದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 63.52 ಲಕ್ಷವಾಗಿದೆ. ಬ್ರೆಜಿಲ್‌ನಲ್ಲಿ 40.54 ಲಕ್ಷ ಸೋಂಕಿತರಿದ್ದಾರೆ. ಆದರೆ, ಸಕ್ರಿಯ ಸೋಂಕಿತರ ಸಂಖ್ಯೆ ಬ್ರೆಜಿಲ್‌ಗಿಂತ ಭಾರತದಲ್ಲೇ ಹೆಚ್ಚಾಗಿದೆ. ಬ್ರೆಜಿಲ್‌ನಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 6.81 ಲಕ್ಷವಾಗಿದೆ. ಭಾರತಲ್ಲಿ ಸಕ್ರಿಯ ಸೋಂಕಿತರು 8.31 ಲಕ್ಷದಷ್ಟಿದ್ದಾರೆ.

ಭಾರತದಲ್ಲಿ ಪ್ರತಿದಿನ ಕಂಡು ಬರುತ್ತಿರುವ ಕೊರೊನಾ ಸೋಂಕಿತರ ಸಂಖ್ಯೆ ಬ್ರೆಜಿಲ್‌ಗಿಂತ ಹೆಚ್ಚಾಗಿದೆ. ಹೀಗಾಗಿ ಒಂದೆರಡು ದಿನಗಳಲ್ಲೇ ಒಟ್ಟು ಸೋಂಕಿತರ ಸಂಖ್ಯೆಯಲ್ಲೂ ಭಾರತ 2ನೇ ಸ್ಥಾನಕ್ಕೆ ಬರಲಿದೆ. ಅಮೆರಿಕ, ಬ್ರೆಜಿಲ್ ಎರಡರಲ್ಲೂ ಕಳೆದ ವಾರದಲ್ಲಿ ಹೊಸ ಸೋಂಕಿತರ ಸಂಖ್ಯೆ ದಿನಕ್ಕೆ 50 ಸಾವಿರದ ಗಡಿ ದಾಟಿಲ್ಲ. ಆದರೆ, ಭಾರತದಲ್ಲಿ ಪ್ರತಿದಿನ ಕಂಡು ಬರುತ್ತಿರುವ ಸೋಂಕಿತರ ಸಂಖ್ಯೆ 70 ಸಾವಿರಕ್ಕೂ ಹೆಚ್ಚಿದೆ. ಶುಕ್ರವಾರ ಒಂದೇ ದಿನ ದೇಶದಲ್ಲಿ 83,341 ಸೋಂಕಿತರು ಕಂಡು ಬಂದಿದ್ದಾರೆ.

## ನಗರಕ್ಕೆ ಇಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್

ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ ಅವರು ಇಂದು ನಗರಕ್ಕಾಗಮಿಸಲಿದ್ದು, ಬೆಳಿಗ್ಗೆ 10.30ಕ್ಕೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಶಿಕ್ಷಕರ ಸಂಘದಿಂದ ಸರ್ಕಾರಿ ನೌಕರರ ಭವನದಲ್ಲಿ ಏರ್ಪಾಡಾಗಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 12 ರಿಂದ 1ರ ವರೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸ್ಥಳೀಯ ಜನಪ್ರತಿನಿಧಿಗಳನ್ನು ಹಾಗೂ ಸಾರ್ವಜನಿಕರನ್ನು ಭೇಟಿ ಮಾಡುವರು. ನಂತರ ಮಧ್ಯಾಹ್ನ 2.30ಕ್ಕೆ ನಗರದಿಂದ ಹುಬ್ಬಳ್ಳಿಗೆ ಪ್ರಯಾಣಿಸುವರು.

## ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಬಿ.ಎಸ್. ಪದ್ದಪ್ಪ ಆಯ್ಕೆ



ಮಲೇಬೆನ್ನೂರು, ಸೆ.4- ಎರೇಬೂದಿಹಾಳು ಗ್ರಾಮದ ಶ್ರೀ ಪಿ. ಮತ್ತು ಬಿ. ಬಸವನಗೌಡ್ರು ಪ್ರೌಢಶಾಲೆಯ ವೃತ್ತಿ ಶಿಕ್ಷಣ ಶಿಕ್ಷಕ ಬಿ.ಎಸ್. ಪದ್ದಪ್ಪ ಅವರು ದಾವಣಗೆರೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

## ಡಿಕೆಶಿ ಮತ್ತೆ ಅಸ್ವಸ್ಥ ಆಸ್ಪತ್ರೆಗೆ ದಾಖಲು



ಬೆಂಗಳೂರು, ಸೆ. 4 - ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅನಾರೋಗ್ಯದಿಂದ ಮತ್ತೆ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕಳೆದ ವಾರ ಕೊರೊನಾ ಸೋಂಕಿಗೆ ಸಿಲುಕಿ ನಗರದ ಖಾಸಗಿ ಆಸ್ಪತ್ರೆಯಲ್ಲಿ 9 ದಿನಗಳ ಕಾಲ ಚಿಕಿತ್ಸೆಗೆ ಒಳಗಾಗಿದ್ದರು.

ಆಸ್ಪತ್ರೆಯಿಂದ ಬಿಡುಗಡೆಗೊಂಡ 3-4 ದಿನಗಳಲ್ಲಿ ಮತ್ತೆ ಅವರಿಗೆ ತೀವ್ರ ರೀತಿ ಜ್ವರ ಕಾಣಿಸಿಕೊಂಡಿದ್ದು, ಈ ಹಿನ್ನೆಲೆಯಲ್ಲಿ ಅವರನ್ನು ನಗರದ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮತ್ತೊಮ್ಮೆ ಕೊರೊನಾ ಪರೀಕ್ಷೆ ಸೇರಿದಂತೆ ತಜ್ಞ ವೈದ್ಯರ ತಂಡ ವಿವಿಧ ಪರೀಕ್ಷೆಗಳಿಗೆ ಶಿವಕುಮಾರ್ ಅವರನ್ನು ಒಳಪಡಿಸಿದ್ದಾರೆ.

ಈ ಮಧ್ಯೆ ಪತ್ರಿಕಾ ಹೇಳಿಕೆ ನೀಡಿರುವ ಶಿವಕುಮಾರ್, ತಾವು ಇನ್ನೂ ಕೆಲವು ದಿನಗಳ ಕಾಲ ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯಲಿದ್ದು, ಕಾರ್ಯಕರ್ತರಾಗಲೀ, ಅಭಿಮಾನಿಗಳಾಗಲೀ ಆಸ್ಪತ್ರೆಗಾಗಲೀ ಅಥವಾ ತಮ್ಮ ನಿವಾಸಕ್ಕಾಗಲೀ ಆಗಮಿಸುವುದು ಬೇಡ ಎಂದು ಮನವಿ ಮಾಡಿದ್ದಾರೆ.


## ಕೊರೊನಾ ವಾರಿಯರ್ ಸಾವು

ಜಗಳೂರು, ಆ.4- ತಾಲ್ಲೂಕಿನ ದೇವಿಕೆರೆಯ ಅಂಗನವಾಡಿ ಕಾರ್ಯಕರ್ತೆ ಸುಧಾಮಣಿ ಅನಾರೋಗ್ಯ ದಿಂದಾಗಿ ಇಂದು ನಿಧನರಾಗಿದ್ದಾರೆ. ದೇವಿಕೆರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅನಾರೋಗ್ಯ ಕಾರಣದಿಂದ ಚಿತ್ರದುರ್ಗದ ಶ್ರೀ ಬಸವೇಶ್ವರ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು. ಆದರೆ,ಚಿಕಿತ್ಸೆಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. ಸುಧಾ ಅವರ ಅಂತ್ಯಕ್ರಿಯೆಯು ಕೊಡದಗುಡ್ಡದಲ್ಲಿ ನಾಳೆ ನಡೆಯಲಿದೆ.

## ಗ್ರಾಮಾಂತರದಲ್ಲಿ ಇಂದು - ನಾಳೆ ವಿದ್ಯುತ್ ವ್ಯತ್ಯಯ

ಮಾಗಾನಹಳ್ಳಿ, ಓಬಜ್ಜಿಹಳ್ಳಿ, ಕಡಲೇಬಾಳು ಹಾಗೂ ಅರಸಾಪುರ ಗ್ರಾಮಗಳ ವ್ಯಾಪ್ತಿಯಲ್ಲಿ ಇಂದು ಮತ್ತು ನಾಳೆ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂನ ಗ್ರಾಮೀಣ ಉಪ ವಿಭಾಗದ ಎಇಇ ಜಿ.ಎಂ. ನಾಯಕ ತಿಳಿಸಿದ್ದಾರೆ.


ASHA DEEP
HAPPY TEACHERS DAY




गुरुर्ब्रह्मा गुरु विष्णुः
गुरु देवो महेश्वरः ।
गुरु साक्षात परब्रह्म
तस्मै श्री गुरुवे नमः ॥

ಗುರು ಬ್ರಹ್ಮ ಗುರು ವಿಷ್ಣುಃ
ಗುರು ದೇವೋ ಮಹೇಶ್ವರಃ
ಗುರು ಸಾಕ್ಷಾತ್ ಪರಬ್ರಹ್ಮ
ತಸ್ಮೈ ಶ್ರೀ ಗುರುವೇ ನಮಃ

Guru Brahma Guru Vishnu
Guru Devo Maheshwara
Guru Sakshat Parbrahma
Tasmai Shri Guruve Namah

No Google, Or Technology can Replace a Teacher Ever.
CHAMRAJPET SHAMANUR ROAD
facebook.com/ashadeepdvg 94498 19127 instagram/ashadeepdvg




ಗೌತಮ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ
ರೈತರ ಬೀದಿ, ದಾವಣಗೆರೆ.
ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ
ನಮ್ಮ ಸಂಘದ ವತಿಯಿಂದ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ಛಲವಾದಿ ಸಮಾಜದ 25 ಪ್ರತಿಭಾನ್ವಿತ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುತ್ತದೆ. ಅರ್ಹ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ(ಆನ್‌ಲೈನ್)ಯೊಂದಿಗೆ ಸಂಘದ ಕಚೇರಿಯಲ್ಲಿ ಬರುವ ಸೆಪ್ಟೆಂಬರ್ 15ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು.
♦ 9449163356 ♦ 984477331 ♦ 9886201014 ♦ 9108953018
ವ್ಯವಸ್ಥಾಪಕರು, ಗೌತಮ್ ಕೋ-ಆಪರೇಟಿವ್ ಸೊಸೈಟಿ, ದಾವಣಗೆರೆ.



ಅಭಿನಂದನೆಗಳು

ದಾವಣಗೆರೆ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿರುವ
ಕೆ.ಸಿ. ಮಲ್ಲೇಶಪ್ಪ
ಮುಖ್ಯ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಿ. ಕಲಪನಹಳ್ಳಿ
ಇವರಿಗೆ ಅಭಿನಂದನೆಗಳನ್ನು ಸಲ್ಲಿಸುವವರು :
ಶಾಲಾ ಸಿಬ್ಬಂದಿ ವರ್ಗ ಹಾಗೂ ಗ್ರಾಮಸ್ಥರು, ಬಿ. ಕಲಪನಹಳ್ಳಿ.




ಪುನರಾರಂಭ
ಶ್ವೇತಾ ಕ್ಯಾಟರಿಂಗ್
ಮಹೇಶ್ ಗ್ರೂಪ್
ಅಡುಗೆ ಕಾಂಟ್ರ್ಯಾಕ್ಟ್, ದಾವಣಗೆರೆ.
ಪ್ರೊ. ಸುಧಾ ಮಹೇಶ್
ನಂ. 1483, 2ನೇ ಮುಖ್ಯರಸ್ತೆ, ಶಿವಾಲಿ ರಸ್ತೆ, ಜಾಲಿನಗರ, ದಾವಣಗೆರೆ.
98860 29884, 08192 270877



ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ
॥ ಶ್ರೀ ಬಸವೇಶ್ವರ ಪ್ರಸನ್ನ ॥
ದಾವಣಗೆರೆ ತಾಲ್ಲೂಕು ಬೆಳವನೂರು ಗ್ರಾಮದ ವಾಸಿ
ಗೌರಪ್ನ (ತೆಂಗಿನಮರದ) ಶ್ರೀ ಜಿ. ಬಸವರಾಜಪ್ಪನವರು
ಮಾಡುವ ವಿಜ್ಞಾಪನೆಗಳು.
ದಿನಾಂಕ 29.08.2020ನೇ ಶನಿವಾರ ಬೆಳಿಗ್ಗೆ 5.30 ಗಂಟೆಗೆ ನನ್ನ ತಮ್ಮನವರಾದ

ಜನನ : 06-10-1950
ನಿಧನ : 29-08-2020
ಶರಣ ತೆಂಗಿನಮರದ ಜಿ. ನಾಗರಾಜಪ್ಪ
(ಶ್ರೀಮತಿ ಶಶಿಕಲಾ ಇವರ ಪೂಜ್ಯ ಪತಿ)
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ 06.09.2020 ನೇ ಭಾನುವಾರ ಬೆಳಿಗ್ಗೆ 10.30 ಕ್ಕೆ
ದಾವಣಗೆರೆ ತಾಲ್ಲೂಕು ಬೆಳವನೂರು ಗ್ರಾಮದ ಮೃತರ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಮೃತರ ಧರ್ಮಪತ್ನಿ ಶ್ರೀಮತಿ ಶಶಿಕಲಾ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು
ಶ್ರೀ ಜಿ. ಬಸವರಾಜಪ್ಪ ಮತ್ತು ಗೌರಪ್ನ ವಂಶಸ್ಥರು, ಬೆಳವನೂರು
ಬಾಡದ ಶ್ರೀಮತಿ ಕರಿಬಸಮ್ಮ, ದಿ॥ ಬಿ.ಕೆ. ಬಸವಲಿಂಗಪ್ಪ ಮತ್ತು ಮಕ್ಕಳು
ದಿ॥ ಶ್ರೀಮತಿ ಪಾರ್ವತಮ್ಮ, ದಿ॥ ಶ್ರೀ ಬಸವರಾಜಪ್ಪ ಮತ್ತು ಮಕ್ಕಳು, ಸಂತೇಬೆನ್ನೂರು.
ಹಾಗೂ ಬಂಧು-ಮಿತ್ರರು. ಮೊ. : 94489 23737, 98441 44083



ಹೃದಯಪೂರ್ವಕ ಅಭಿನಂದನೆಗಳು
ದಾವಣಗೆರೆ ಜಿಲ್ಲೆ
ಭಾರತೀಯ ಜನತಾ ಪಾರ್ಟಿ
ಯುವ ಮೋರ್ಚಾದ ನೂತನ
ಕಾರ್ಯದರ್ಶಿಯಾಗಿ ನೇಮಕಗೊಂಡಿರುವ
ಶ್ರೀ ಪ್ರಶಾಂತ್ ಬಿ.ಎಸ್.
ಅವರಿಗೆ
ಹೃದಯಪೂರ್ವಕ ಅಭಿನಂದನೆಗಳು

ಶುಭ ಕೋರುವವರು

ಆರ್.ಎಲ್. ಲಾ ಕಾಲೇಜು ಹಳೆಯ ವಿದ್ಯಾರ್ಥಿಗಳು ಮತ್ತು ವಕೀಲರು ದಾವಣಗೆರೆ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte